

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

SK NEWS ಕನ್ನಡ



ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119



Volume : 06 Issue : 318 Friday 30-08-2024 E-mail : maruti.b.hosamani76@gmail.com Page: 4 Price : Rs. 1/-


## ಉಜ್ಜಿನಿ ವಲಯ ಮಟ್ಟದ ಹಿರಿಯ ಪ್ರಾಥಮಿಕ ಶಾಲೆಯ ಕ್ರೀಡಾಕೂಟದ ಪಂದ್ಯಾವಳಿ ಉದ್ಘಾಟನೆ



**ಮಂಗಾಪುರ :** ಕೊಟ್ಟೂರು ತಾಲೂಕಿನ ಮಂಗಾಪುರ ಗ್ರಾಮದಲ್ಲಿ ಉಜ್ಜಿನಿ ವಲಯ ಮಟ್ಟದ ಕ್ರೀಡಾಕೂಟಗಳನ್ನು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮಂಗಾಪುರ ಹಾಗೂ ಮಂಗಾಪುರ ಮಹಾ ದೈವದವರಿಂದ ಆಯೋಜಿಸಲಾಗಿತ್ತು.

ಪಂದ್ಯಾವಳಿಯ ಉದ್ಘಾಟನೆಯನ್ನು ಎಂ ಗುರು ಸಿದ್ದನಗೌಡ ವಕೀಲರು ಹಾಗೂ ಗುಳಿಗೆ ವೀರೇಂದ್ರ ಉದ್ಘಾಟಿಸಿದರು. ಮಾನ್ಯ ಶಾಸಕರ ಸಹೋದರರಾದ ಎನ್.ಟಿ. ತಮ್ಮಣ್ಣ ಅವರು ಕ್ರೀಡಾ ಜ್ಯೋತಿಯನ್ನು ಬೆಳಗಿಸಿದರು. ಮತ್ತು ಧ್ವಜಾರೋಹಣ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಎಂ ಮಾಂತೇಶ್ ಅವರು ನೆರವೇರಿಸಿದರು. ಮಂಗಾಪುರದ ಕಾಲೇಜು ವಿದ್ಯಾರ್ಥಿಗಳಿಂದ ಕ್ರೀಡಾ ಜ್ಯೋತಿ ಯಾ೯ಲಿ ನಡೆಯಿತು ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಸದಸ್ಯರಾದ ಎಂಪಿ ರಾಜಶೇಖರ್ ಗೌಡ್ರು. ಜಿ ಬಸವರಾಜ್. ನೇತ್ರಾವತಿ ಓಬಳೇಶ್. ಬಣಕಾರ್ ಮಹೇಶಮ್ಮ ಶರಣಪ್ಪ. ಉಮಾ ಎಚ್ ಸಿದ್ದಪ್ಪ ಹಾಗೂ ಊರಿನ ಮುಖಂಡರಾದ ಎಸ್ ದೊಡ್ಡ ವೀರಪ್ಪ ನಿವೃತ್ತ ಶಿಕ್ಷಕರು ಮಂಗಾಪುರ ಗ್ರಾಮದ ಹಳೆ ವಿದ್ಯಾರ್ಥಿಗಳು ಮತ್ತು ಹಾಲಿ ವಿದ್ಯಾರ್ಥಿಗಳು ಮಾಂತೇಶ್ ಅರ್ಚಕರು ಪಿ.ಟಿ.ಓ. ಶಶಿಧರ ವಲಯ ಸಂಚಾಲಕರಾದ ಮಲ್ಲಿಕಾರ್ಜುನ್. ಸಾ ಹಿ ಪ್ರ ಶಾಲಾ ಮಂಗಾಪುರ ಸಿಬ್ಬಂದಿ ವರ್ಗದವರು ಆರಕ್ಷಕ ಠಾಣಾ ಖಾನಾ ಹೊಸಹಳ್ಳಿ ಅವರು ಆರೋಗ್ಯ ಸಿಬ್ಬಂದಿಯವರು ವಿದ್ಯುತ್ ಇಲಾಖೆಯವರು ಮತ್ತು ಸಮಸ್ತ ಮಂಗಾಪುರ ನಾಗರಿಕ ಬಾಂಧವರು ಸೇರಿ ಶಾಂತಿ ರೀತಿಯಿಂದ ಕ್ರೀಡೋತ್ಸವವನ್ನು ಯಶಸ್ವಿಯಾಗಿ ನೆರವೇರಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್. ಕುಮಾರ್.ಸಿ.ಕೊಟ್ಟೂರು.**

# ಗಣೇಶ ಹಬ್ಬ, ಈದ್ ಮಿಲಾದ್ ಹಬ್ಬದ ಶಾಂತಿ ಸಭೆ

**ದೇವರ ಹಿಪ್ಪರಗಿ :** ಗಣೇಶನ ಪ್ರತಿಷ್ಠಾಪನೆಯಿಂದ ವಿಸರ್ಜನೆ ವರೆಗಿನ ಗಣೇಶ ಉತ್ಸವ ಹಾಗೂ ಈದ್ ಮಿಲಾದ್ ಹಬ್ಬಗಳನ್ನು ಶಾಂತಿ ಯುತವಾಗಿ ಆಚರಿಸುವುದರ ಮೂಲಕ ಮಹಾ ಮಂಡಳಿ ಹಾಗೂ ಯುವಕ ಸಂಘಗಳು ಪೊಲೀಸ್ ಇಲಾಖೆಗೆ ಸಹಕಾರ ನೀಡಬೇಕು ಎಂದು ಸಿ.ಪಿ.ಆಯ್ ಆನಂದರಾವ್ ಎಸ್.ಎನ್ ಹೇಳಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ನಿಮಿತ್ಯವಾಗಿ ಜರುಗಿದ ಶಾಂತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪಟ್ಟಣ ಶಾಂತಿ, ಸೌಹಾರ್ದತೆಗೆ ಹೆಸರಾಗಿದೆ. ಇದನ್ನು ಮುಂದುವರೆಸಿ ಕೊಂಡು



ಹೋಗುವುದರ ಜೊತೆಗೆ ಎಲ್ಲರೂ ಸರ್ಕಾರದ ನಿಯಮಾವಳಿ ಪಾಲನೆ ಮಾಡಬೇಕು. ಯಾವುದೇ ಅನಗತ್ಯ ವಿಷಯಗಳತ್ತ ಗಮನ ನೀಡದೇ, ಶಿಸ್ತು, ಸಹನೆಯಿಂದ ಹಬ್ಬಗಳ ಆಚರಣೆಗೆ ಮುಂದಾಗ ಬೇಕು ಎಂದರು.

ಪಿಎಸೈ ಬಸವರಾಜ ತಿಪ್ಪಾರೆಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿ, ಪೊಲೀಸ್ ಇಲಾಖೆ ಜನ ಸ್ನೇಹಿ ಇಲಾಖೆಯಾಗಿ ಸಾರ್ವಜನಿಕರಿಗೆ ಸ್ಪಂದಿಸುತ್ತಿದೆ. ಯಾವುದೇ ಕಾರಣಕ್ಕೂ ಸಮಾಜದ ಶಾಂತಿ ಕದಡುವ ಅಹಿತಕರ ಘಟನೆಗಳಿಗೆ ಆಸ್ಪದವಿಲ್ಲ. ಪಟ್ಟಣದ ಎಲ್ಲ ಗಣೇಶ ಮಹಾ ಮಂಡಳಿಗಳಿಗೆ ಹೆಸ್ಕಾಂ, ಪಟ್ಟಣ ಪಂಚಾಯಿತಿ ಸೇರಿದಂತೆ ಪೊಲೀಸ್ ಇಲಾಖೆಯ ಸಂಪೂರ್ಣ ಸಹಕಾರವಿದ್ದು, ಗಣೇಶ ಯುವಕ ಮಂಡಳಿಗಳು ಇಲಾಖೆಯ ನಿಯಮಾವಳಿಗಳನ್ನು ಪಾಲಿಸ ಬೇಕು ಎಂದರು.

ಮಹಾ ಮಂಡಳ ಹಾಗೂ ಸಾರ್ವಜನಿಕರ ಪರವಾಗಿ ಸಿ.ಕೆ.ಕುದರಿ, ಮಹಿಬೂಬ್ ಹುಂಡೇಕಾರ, ಶಂಕರಗೌಡ ಪಾಟೀಲ, ಅಜೀಜ್ ಯಲಗಾರ ಮಾತನಾಡಿದರು. ಮಹಿಳಾ ಪಿಎಸ್ಐ ಪಿ.ಎಮ್.ಚೌರ, ಪಟ್ಟಣ ಪಂಚಾಯಿತಿ ಸದಸ್ಯರಾದ ಕಾಸುಗೌಡ ಬಿರಾದಾರ ಜಲಕತ್ತಿ ಕಾಸು ಜಮಾದಾರ ನಾಮನಿರ್ದೇಶಿತ ಸದಸ್ಯರಾದ ಹುಸೇನ್ ಕೊಕಟನೂರ, ಸುನೀಲ ಕನಮಡಿ, ಸೇರಿದಂತೆ ಬಾಬುಗೌಡ ಪಾಟೀಲ ಜಿಡ್ಡಿಮನಿ, ಹುಸೇನ್ ಗೌಂಡಿ, ಕಾಸು ವಡ್ಡೋಡಗಿ, ಎಸ್.ವೈ.ನಾಯ್ಕೋಡಿ, ಬಸವರಾಜ ತಳಕೇರಿ, ಶಬ್ಬೀರ್ ಮುಲ್ಲಾ, ಎ.ಎಚ್. ಜಮಾದಾರ, ಭೀಮು ಚವ್ಹಾಣ, ಸುರೇಶ ಒಂಟೆತ್ತೀನ, ನಾಗಪ್ಪ ಬಂಡಿವಡ್ಡರ, ಪ್ರಕಾಶ ತಳಕೇರಿ, ಕಾಶೀನಾಥ ಚವ್ಹಾಣ ಸಹಿತ ಪೊಲೀಸ್ ಸಿಬ್ಬಂದಿ ಇದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್:ಭೀಮಪ್ಪ. ಹಚ್ಯಾಳ ದೇವರ ಹಿಪ್ಪರಗಿ**

# ಕ್ಷಯ ರೋಗ ತಡೆಗೆ ಮುಂಜಾಗ್ರತೆಯಾಗಿ ಬಿ.ಸಿ.ಜಿ–ಲಸಿಕಾ ಅಭಿಯಾನ ಜಾಗೃತಿ

**ಹೊನ್ನಾಕಟ್ಟಿ :** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಕ್ಷಯ ರೋಗ ನಿಯಂತ್ರಣ ಅಧಿಕಾರಿಗಳು ಜಿಲ್ಲಾ ಲಸಿಕಾ ಅಧಿಕಾರಿಗಳು ಸಹಯೋಗದಲ್ಲಿ ಬೆನಕಟ್ಟಿ ಉಪ ಕೇಂದ್ರ ವ್ಯಾಪ್ತಿಯ ಹೊನ್ನಾಕಟ್ಟಿಯಲ್ಲಿ, ಕ್ಷಯ ರೋಗ ಮುಕ್ತಕ್ಕಾಗಿ ಬಿ.ಸಿ.ಜಿ ಲಸಿಕಾ ಅಭಿಯಾನ ಅರ್ಹ ಫಲಾನುಭವಿಗಳ ಸಮೀಕ್ಷೆ ಜನ ಜಾಗೃತಿ ಆಯೋಜಿಸಲಾಗಿತ್ತು. ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್.ಎಸ್ ಅಂಗಡಿಯವರು ಟಿ.ಬಿ ಸೋಲುತ್ತದೆ ಭಾರತ ಗೆಲ್ಲುವುದು, ವಿಶ್ವ ಆರೋಗ್ಯ ಸಂಸ್ಥೆ ಮಾರ್ಗದರ್ಶನದಲ್ಲಿ ಕ್ಷಯ ರೋಗ ಮುಕ್ತಕ್ಕಾಗಿ ಬಿ.ಸಿ.ಜಿ ಲಸಿಕಾ ಅಭಿಯಾನ 18 ವರ್ಷ ಮೇಲ್ಪಟ್ಟ ಅರ್ಹ ಫಲಾನುಭವಿಗಳ ಸಮೀಕ್ಷೆ ಜನ ಜಾಗೃತಿ ಪ್ರತಿಯೊಂದು ಕುಟುಂಬ ದತ್ತಾಂಶ ಸಂಗ್ರಹ ಮಾಡಿ ಅಶಕ್ತ ಮಧುಮೇಹ ಕ್ಷಯ ರೋಗ ಚಿಕಿತ್ಸೆಯಲ್ಲಿರುವ ಪ್ರಕರಣ ಸಂಪರ್ಕಗಳ ಮಾಹಿತಿ ಸಂಗ್ರಹಿಸಿ "ಬಿ.ಸಿ.ಜಿ" ಲಸಿಕೆ ಹಾಕಲಾಗುವುದು ಲಸಿಕೆ ಸುರಕ್ಷಿತವಾಗಿದ್ದು ಮಗು ಜನಿಸಿದ ಒಂದು ಘಂಟೆ, ಎಲ್ಲ ಸರಕಾರಿ ಆಸ್ಪತ್ರೆಯಲ್ಲಿ ಬಿ.ಸಿ.ಜಿ ಲಸಿಕೆ ಹಾಕಲಾಗುವುದು ಉಪ ಕೇಂದ್ರ ಲಸಿಕಾ ಅಭಿಯಾನದ ಮುಖಾಂತರ ಲಸಿಕೆ ಹಾಕಲಾಗುವುದು ಅಡ್ಡ ಪರಿಣಾಮಗಳಿದ್ದರೂ ತಾತ್ಕಾಲಿಕ ಕ್ಷಯ ರೋಗ ಮುಂಜಾಗ್ರತೆಯಾಗಿ ಲಸಿಕೆ ಹಾಕಲಾಗುವುದು ಗ್ರಾಮದಲ್ಲಿ ಕ್ಷಯ ರೋಗ ಮುಕ್ತಕ್ಕಾಗಿ ಬಿ.ಸಿ.ಜಿ ಲಸಿಕಾ ಅಭಿಯಾನ ಅರ್ಹ ಫಲಾನುಭವಿಗಳ ಸಮೀಕ್ಷೆ ಕಾರ್ಯಕ್ಕೆ ನಿಮ್ಮ ಮನೆ ಮನೆಗೆ ಆರೋಗ್ಯ ಅಧಿಕಾರಿಗಳು ಆಶಾ ಕಾರ್ಯ ಕರ್ತೆಯರು ಬಂದಾಗ ಸರಿಯಾದ ಮಾಹಿತಿ ನೀಡಿ ಸಾರ್ವಜನಿಕರು ಸಹಕಾರ ನೀಡಿ ಕ್ಷಯ ರೋಗ ಮುಕ್ತಕ್ಕಾಗಿ ಕೈಜೋಡಿಸ ಬೇಕೆಂದರು. ಕ್ಷಯ ರೋಗ ಮುಕ್ತಾಕ್ಕಾಗಿ "ಬಿ.ಸಿ.ಜಿ" ಲಸಿಕಾ ಅಭಿಯಾನ ಅರ್ಹ ಫಲಾನುಭವಿಗಳ ಸಮೀಕ್ಷೆ ಕಾರ್ಯದಲ್ಲಿ ಆರೋಗ್ಯ ಅಧಿಕಾರಿಗಳು ಆಶಾ ಕಾರ್ಯಕರ್ತೆಯರು ಗ್ರಾಮದ ಮುಖಂಡರು ಯುವಕರು ಭಾಗವಹಿಸಿದ್ದರು.



## ಸೆಪ್ಟೆಂಬರ್ 30ರಂದು ಶ್ರೀ ದೇವಲ ಪಟ್ಟಣ ಪತ್ತಿನ ಸಹಕಾರ ಸಂಘ ನಿಯಮಿತ ಇಲಕಲ್ಲ ನೂತನ ಕಟ್ಟಡ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ

**ಹೊನ್ನನುಡಿ ಸುದ್ದಿ**

**ಇಳಕಲ್ :** ದೇವಾಂಗ ಸಮಾಜ ಬಾಂಧವರು ರಚಿಸಲ್ಪಟ್ಟ ನಗರದ ಪ್ರತಿಷ್ಠಿತ ಹಣಕಾಸು ಸಂಸ್ಥೆಗಳಲ್ಲಿ ಒಂದಾದ ಶ್ರೀ ದೇವಲ ಪಟ್ಟಣ ಪತ್ತಿನ ಸಹಕಾರ ಸಂಘ ನಿಯಮಿತ ಇಳಕಲ ಸಂಘದ ನೂತನ ಕಟ್ಟಡ ಉದ್ಘಾಟನೆ ಹಾಗು ಪ್ರತಿಭಾ ಪುರಸ್ಕಾರ ಸಮಾರಂಭವು ಇದೇ ಸೆಪ್ಟೆಂಬರ್ 30 ರಂದು ಸಂಘದ ನೂತನ ಕಚೇರಿ 3ನೇ ವಾರ್ಡ್ ಲಕ್ಷ್ಮಿ ಗೌಡರಪೇಟೆ ಓಂಕಾರ್ ಚಿತ್ರಮಂದಿರ ಹತ್ತಿರ ಮುಂಜಾನೆ 10–30 ಗಂಟೆಗೆ ನೆಡೆಯಲಿದ್ದು,



ಸಮಾರಂಭದ ದಿವ್ಯ ಸಾನಿಧ್ಯವನ್ನು ಶ್ರೀ ಶ್ರೀ ಶ್ರೀ ದಯಾನಂದ ಪುರಿ ಮಹಾಸ್ವಾಮಿಗಳು, ದೇವಾಂಗ ಜಗದ್ಗುರುಗಳು ಗಾಯತ್ರಿ ಹೇಮಕೂಟ ಹಂಪಿ,

ಪರಮಪೂಜ್ಯ ಶ್ರೀ ಮ.ನಿ. ಪ್ರ.ಗುರು ಮಹಾಂತ ಸ್ವಾಮೀಜಿಗಳು ಚಿತ್ತರಗಿ ಸಂಸ್ಥಾನ ಮಠ ಇಲಕಲ್ಲ,

ವೇದಮೂರ್ತಿ ಶ್ರೀ ಮುನಿಸ್ವಾಮಿಗಳು ವಿ ದೇವಾಂಗಮಠ ಶ್ರೀ ಶಂಕರಿ ರಾಮಲಿಂಗ ದೇವಸ್ಥಾನ ಗುಬ್ಬಿ ಪೇಟ್ ಇಲಕಲ್ಲ ಇವರು ವಹಿಸಲಿದ್ದು ನೂತನ ಕಚೇರಿ ಕಟ್ಟಡದ ಉದ್ಘಾಟನೆಯನ್ನು ಶಾಸಕ ವಿಜಯಾನಂದ ಎಸ್ ಕಾಶಪ್ಪನವರ್ ನೆರವೇರಿಸುವರು ನಾಮಫಲಕದ ಅನಾವರಣವನ್ನು ಮಾಜಿ ಶಾಸಕ ದೊಡ್ಡನಗೌಡ ಜಿ ಪಾಟೀಲ್ ನೆರವೇರಿಸಲಿದ್ದು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ದೇವಲ್ ಪಟ್ಟಣ ಪತ್ತಿನ ಸಹಕಾರಿ ಸಂಘ ನಿಯಮಿತ ಇಳಕಲ್ಲ ಅಧ್ಯಕ್ಷ ಮಹಾಂತೇಶ ಕರ್ಜಗಿ ವಹಿಸಲಿದ್ದು,

ಬ್ಯಾಂಕಿನ ಸರ್ವ ವ್ಯವಹಾರಸ್ಥರು,ಶೇರುದಾರಬಾಂಧವರು,ವ್ಯಾಪಾರಸ್ತರು,ನೇಕಾರಬಂಧುಗಳು,ದೇವಾಂಗ ಸಮಾಜ ಬಾಂಧವರಿಗೆ ಹಾಗು ನಗರದ ಸರ್ವರಿಗೂ ಆದರದ ಸ್ವಾಗತನ್ನು ಸಂಸ್ಥೆಯ ಅಧ್ಯಕ್ಷರಾದ ಮಹಾಂತೇಶ ಕರ್ಜಿಗಿ ಹಾಗು ಆಡಳಿತ ಮಂಡಳಿ ನಿರ್ದೇಶಕರು, ಬ್ಯಾಂಕ್ ಕಾರ್ಯದರ್ಶಿ ಲಕ್ಷ್ಮಣ್ ಬಿದರಿ ಅವರು ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

## ಹೇರೂರು ಗ್ರಾಮದಲ್ಲಿ ಸ್ನೇಹ ಸಂಸ್ಥೆ ಹಾಗೂ ಆರೋಗ್ಯ ಇಲಾಖೆ ಸಂಯೋಗದಲ್ಲಿ ಸಮುದಾಯ ಆರೋಗ್ಯ ತಪಾಸಣೆ ಶಿಬಿರ



**ಹೊನ್ನನುಡಿ ಸುದ್ದಿ ಇಳಕಲ್ :** ಇಲ್ಲಿಗೆ ಸಮೀಪದ ಹೇರೂರ ಗ್ರಾಮದಲ್ಲಿ ಸ್ನೇಹ ಸಂಸ್ಥೆ ಹಾಗೂ ಆರೋಗ್ಯ ಇಲಾಖೆ ಸಂಯೋಗದಲ್ಲಿ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು ಈ ಶಿಬಿರ ಉದ್ದೇಶಿಸಿ ಸಮುದಾಯ ಆರೋಗ್ಯ ಅಧಿಕಾರಿಯಾದ ರಿಟಾ ಮಾತನಾಡಿ ಪ್ರತಿಯೊಬ್ಬರೂ ಸಹ ಆರೋಗ್ಯದ ಕಡೆ ಗಮನಹರಿಸಬೇಕು. ಇತ್ತಿಚ್ಚಿಗೆ ಬಿಪಿ, ಶುಗರ್ ಕಾಯಿಲೆ ಅನ್ನೋದು ಮನೆ ಮಾತಾಗಿದೆ. 30 ವರ್ಷ ಮೇಲ್ಪಟ್ಟವರಿಗೆ ವರ್ಷಕ್ಕೆ ಒಂದು ಸಾರಿ ಹಾಗೂ ಈಗಾಗಲೇ ಮಧುಮೇಹ ಮತ್ತು ರಕ್ತದ ಒತ್ತಡದಿಂದ ಬಳಲುತ್ತಿರುವವರಿಗೆ ತಿಂಗಳಿಗೆ ಒಂದು ಸಲ ಉಚಿತ ಬಿಪಿ, ಶುಗರ್ ತಪಾಸಣೆ ಮಾಡಲಾಗುವುದು.ಇದರ ಜೊತೆಗೆ ಡೆ–ಂಗ್ಯೂ ಕೂಡ ಇತ್ತೀಚಿಗೆ ಹೆಚ್ಚು ಕಂಡು ಬರುತ್ತಾ ಇದೆ, ಆದಕಾರಣ ನೀವು ನಿಮ್ಮ ಮನೆಯಲ್ಲಿ, ಅಂಗಳದಲ್ಲಿ, ಟೈಯರ್ ಗಳಲ್ಲಿ, ತೆಂಗಿನ ಚಿಪ್ಪು ಗಳಲ್ಲಿ, ನೀರು ತುಂಬಾ ದಿನ ಹಿಡಿದು ಇಡಬೇಡಿ ಅದನ್ನು ಆಗಾಗ ಬದಲಾಯಿಸುತ್ತಾ ಇರಬೇಕು ಎಂದರು. ಈ ಶಿಬಿರದಲ್ಲಿ ಸ್ನೇಹ ಸಂಸ್ಥೆಯ ಯೋಜನಾ ಸಂಯೋಜಕರಾದ ಕೆ. ಗೋಣಿ ಬಸಪ್ಪ, ಸಿಬ್ಬಂದಿಯಾದ ಕಾಶೀನಾಥ್ ವೈ ಗುಡಿಮನಿ ಹಾಗೂ ಆಶಾ ಕಾರ್ಯಕರ್ತೆಯರಾದ ಸಾವಿತ್ರಿ ಮೇಟಿ ಹಾಗೂ ಶೃತಿ ಮೇಟಿ ಹಾಗೂ ಗ್ರಾಮದ ಹಿರಿಯರಾದ ಎಸ್ ಬಿ ರಾಂಪುರ, ಅಶೋಕಪ್ಪ ನಾಡಗೌಡ, ಶಾಂತ ಗೌಡ, ಹನಮಗೌಡ ಹಾಗೂ ಸೋಮಲಿಂಗಯ್ಯ ಹಿರೇಮಠ ಉಪಸ್ಥಿತರಿದ್ದರು.

# ಶ್ರೀ ಸತ್ಯಾತ್ಮತೀರ್ಥರ ಚಾತುರ್ಮಾಸ್ಯದ ಅಂಗವಾಗಿ ಉಚಿತ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ

**ಇಳಕಲ್ :** ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಾತ್ಮತೀರ್ಥರ ದಿವ್ಯಾನುಗ್ರಹದಿಂದ ನೂರು ಜನ ಬಡವರಿಗೆ ಉಚಿತವಾಗಿ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆಯನ್ನು ಮಾಡಲಾಗುವುದು ಎಂದು ಖ್ಯಾತ ನೇತ್ರ ತಜ್ಞರಾದ ಡಾ. ಸುಶೀಲ ಕಾಖಂಡಕಿಯವರು ಇಂದು ಪತ್ರಿಕಾ ಹೇಳಿಕೆ ನೀಡಿದ್ದಾರೆ. ರಾಘವೇಂದ್ರ ನೇತ್ರಸೇವಾ ಕೇಂದ್ರ ಚಾರಿಟೇಬಲ್ ಟ್ರಸ್ಟ್, ಇಳಕಲ್ ಬ್ರಾಹ್ಮಣ ಸಮಾಜ ಹಾಗೂ ಲಯನ್ಸ್ ಕ್ಲಬ್ ಇಳಕಲ್ ಶಾಖೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಅಗಸ್ಟ್ 30 ಹಾಗೂ 31ರಂದು ಕಣ್ಣಿನ ಪೊರೆ ಉಚಿತ ಶಸ್ತ್ರಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದ ಸಾರ್ವಜನಿಕರು ಈ ಶಿಬಿರದ ಪ್ರಯೋಜನ ಪಡೆಯಬಹುದಾಗಿದೆ ಎಂದು ಅವರು ಹೇಳಿದರು.

ಈ ಉಚಿತ ಶಿಬಿರದ ಎಲ್ಲ ಮಾಹಿತಿಗಳನ್ನು ಟ್ರಸ್ಟ್ನ ಅಧ್ಯಕ್ಷೆ ಸುದೀಪ್ತಾ ಕಾಖಂಡಕಿಯವರು ತಿಳಿಸುತ್ತಾ ಲೋಕಕಲ್ಯಾಣಕ್ಕಾಗಿ ಅನೇಕ ಸೇವೆ ಹಾಗೂ ಯೋಜನೆಗಳನ್ನು ಹಾಕಿಕೊಂಡು ಈಗ ಮುಂಬೈನಲ್ಲಿ ಚಾತುಮಾಸ್ಯ ಸಂಕಲ್ಪ ಕೈಗೊಂಡಿರುವ ಉತ್ತರಾದಿ ಮಠಾಧೀಶರಾದ ಶ್ರೀ ಶ್ರೀ ಸತ್ಯಾತ್ಮತೀರ್ಥರ ಅನುಗ್ರಹದಿಂದ ಈ ಶಿಬಿರವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು. ಭವ್ಯ ಇತಿಹಾಸ ಹೊಂದಿರುವ ಉತ್ತರಾದಿ ಮಠದ ಚಾತುರ್ಮಾಸ್ಯ ಹಾಗೂ ಮಹಾಸಮಾರಾಧನೆಗಳು



ದೇಶಾದ್ಯಂತ ತುಂಬಾ ಜನಪ್ರಿಯವಾಗಿವೆ. ಶ್ರೀ ಸತ್ಯಾತ್ಮತೀರ್ಥರ ದರ್ಶನ ಮಾತ್ರದಿಂದ ತಮ್ಮ ಪಾಪಗಳೆಲ್ಲ ದೂರವಾಗುವವು ಎಂದು ಭಕ್ತರು ನಂಬಿದ್ದಾರೆ. ಶ್ರೀಗಳ ಕ್ಷಣಮಾತ್ರದ ದರ್ಶನಕ್ಕಾಗಿ ಜನರು ಹಾತೊರೆಯುತ್ತಾರೆ. ವಿದೇಶಗಳಲ್ಲಿಯೂ ಅವರಿಗೆ ಅಪಾರ ಸಂಖ್ಯೆಯ ಭಕ್ತರಿದ್ದಾರೆಂದು ಈ ಸಂದರ್ಭದಲ್ಲಿ ಕಾಖಂಡಕಿ ದಂಪತಿಗಳು ಗುರುಗಳನ್ನು ಸ್ಮರಿಸಿದರು.

ಇಳಕಲ್ ಬ್ರಾಹ್ಮಣ ಸಮಾಜ, ಲಯನ್ಸ್ ಕ್ಲಬ್ ಹಾಗೂ ಜೇಸಿ ಸಿಲ್ಕ್ ಸಿಟಿ ಸಂಸ್ಥೆ, ಅಕ್ಕನ ಬಳಗ ಸಂಸ್ಥೆ, ಕುಷ್ಟಗಿ ಇನ್ನರ್ ವ್ಹೀಲ್ ಕೂಡಾ ಈ ಸೇವೆಯಲ್ಲಿ ಕೈಜೋಡಿಸಿವೆ. ಅಗಸ್ಟ್ 30ರಂದು ತಮ್ಮ ಆಸ್ಪತ್ರೆಯಲ್ಲಿ ಕ್ಯಾಟರ್ಯಾಕ್ಟ್ ಆಪರೇಶನ್ ಮಾಡಲಾಗುವುದು ಹಾಗೂ ಮರುದಿನ 31ರಂದು ಶಸ್ತ್ರಚಿಕಿತ್ಸೆಗೆ ಒಳಗಾದವರಿಗೆ ಶುಶ್ರೂಷೆ ಮಾಡಲಾಗುವುದು ಎಂದು ಡಾ. ಕಾಖಂಡಕಿ ಅವರು ತಿಳಿಸಿದರು. 31ರಂದು ಬೆಳಿಗ್ಗೆ ಪಾಂಡುರಂಗ ಸಮುದಾಯ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಎಲ್ಲ ಫಲಾನುಭವಿಗಳು ಭಾಗವಹಿಸುತ್ತಾರೆ. ಸಮಾರಂಭದ ಮುಖ್ಯ ಅತಿಥಿಗಳಾಗಿ ಹುನಗುಂದ ಮತಕ್ಷೇತ್ರದ ಶಾಸಕರಾದ ಶ್ರೀ ವಿಜಯಾನಂದ ಕಾಶಪ್ಪನವರ ಹಾಗೂ ಹಿರಿಯ ಮುಖಂಡರಾದ ವೆಂಕಟೇಶ ಸಾಕಾ, ರಾಜು ಎಂ. ಬೋರಾ, ಶಾಂತು ಸುರಪುರ, ಅವರು ಆಗಮಿಸಲಿದ್ದಾರೆ. ಶ್ರೀಮತಿ ಸುದೀಪ್ತಾ ಈ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ವೇದಿಕೆಯ ಮೇಲೆ ಬ್ರಾಹ್ಮಣ ಸಮಾಜದ ಅಧ್ಯಕ್ಷ ಪಾಂಡುರಂಗ ಕುಲಕರ್ಣಿ, ಲಯನ್ಸ್ ಕ್ಲಬ್ ಅಧ್ಯಕ್ಷ ಮಹಾಬಳೇಶ ಮರಟದ, ಜೇಸಿ ಸಿಲ್ಕ್ ಸಿಟಿ ಅಧ್ಯಕ್ಷೆ ರಾಜೇಶ್ವರಿ ಹರಿಹರ ಉಪಸ್ಥಿತರಿರುತ್ತಾರೆ.

ಶ್ರೀ ಮಧ್ವಾಚಾರ್ಯರ ಮೂಲ ಮಹಾಸಂಸ್ಥಾನವಾದ ಉತ್ತರಾದಿ ಮಠವು ಶ್ರೀ ಸತ್ಯಾತ್ಮತೀರ್ಥರ ವಿದ್ವತ್ತು ಹಾಗೂ ಶಿಷ್ಯರಿಗೆ ಅವರು ಧಾರೆ ಎರೆಯುವ ಕೋಟಿ ವಿದ್ವತ್ತುಗಳಿಂದ ಶ್ರೀಮಠವು ಕೀರ್ತಿಶಿಖರದ ಉತ್ತುಂಗ–ಕ್ಕೇರಿದೆ. ಸದಾ ಲೋಕಕಲ್ಯಾಣದ ಚಿಂತನೆಯನ್ನು ಕಟ್ಟಿಮಾಡುತ್ತಿರುವ ಉತ್ತರಾದಿ ಮಠಾಧೀಶರ ಅನುಗ್ರಹವು ನಮ್ಮ ಜೀವನವನ್ನು ಪುನೀತಗೊಳಿಸಿದೆ ಎಂದು ಡಾ. ಕಾಖಂಡಕಿ ಹೇಳಿದರು.

# ಸೋಲು–ಗೆಲುವು ಸಮಾನವಾಗಿ ಸ್ವೀಕರಿಸಿ: ಬಿಇಓ ಬಿ.ಎಸ್ ಸಾವಳಗಿ

**ತಾಳಿಕೋಟಿ :** ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆ ಎಷ್ಟು ಮುಖ್ಯವೋ ಕ್ರೀಡೆಗಳು ಸಹ ಅಷ್ಟೇ ಮುಖ್ಯವಾಗಿವೆ. ಇವೆರಡೂ ಒಂದೇ ನಾಣ್ಯದ ಎರಡು ಮುಖಗಳು ವಿದ್ಯಾರ್ಥಿಯ ಸರ್ವಾಂಗೀಣ ಪ್ರಗತಿಯಲ್ಲಿ ಆಟಗಳು ಮಹತ್ವದ ಪಾತ್ರ ನಿರ್ವಹಿಸುತ್ತವೆ ಎಂದು ಮುದ್ದೇಬಿಹಾಳ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಸ್.ಸಾವಳಗಿ ಹೇಳಿದರು. ತಾಲೂಕಿನ ಬಳಗಾನೂರ ಗ್ರಾಮದ ಸರಕಾರಿ ಮಾದರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ ಮಿಣಜಗಿ ಕ್ಲಸ್ಟರ್ ಮಟ್ಟದ ಪ್ರಾಥಮಿಕ ಶಾಲೆಗಳ 2024–2025 ನೇ ಸಾಲಿನ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಒಳ್ಳೆಯ ಕ್ರೀಡಾ ಮನೋಭಾವದೊಂದಿಗೆ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು. ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು. ಕ್ರೀಡೆಯ ಜೊತೆಗೆ ಪಾಠವನ್ನೂ ಆಸಕ್ತಿಯಿಂದ ಮಾಡಬೇಕು.ಆಟ ಮತ್ತು ಪಾಠ ಜೊತೆಯಾಗಿಯೇ ಇರಲಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಕ್ರೀಡಾ ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡಿದ ಕಸಾಪ ತಾಲೂಕಾ ಅಧ್ಯಕ್ಷ ಆರ್.ಎಲ್.ಕೊಪ್ಪದ ಅವರು ಈ ಶಾಲೆಯಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ಕ್ರೀಡೆಗಳಿಗೂ ಮಹತ್ವವನ್ನು ನೀಡುತ್ತಿರುವುದು ಸಂತೋಷದ ವಿಷಯವಾಗಿದೆ.



ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ ಆಸಕ್ತಿಯಿಂದ ಭಾಗವಹಿಸುವುದು ಮುಖ್ಯವಾಗಿದೆ ಎಂದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಟಿ. ವಜ್ಜಲ್ ಕ್ರೀಡಾಪಟುಗಳಿಗೆ ಕ್ರೀಡಾ ಪ್ರತಿಜ್ಞಾ ವಿಧಿ ಬೋಧಿಸಿದರು. ಎಸ್ಡಿಎಂಸಿ ಅಧ್ಯಕ್ಷರ ಪ್ರತಿನಿಧಿ ಆನಂದಯ್ಯ ಮದರಿಮಠ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕ್ರೀಡಾಕೂಟದಲ್ಲಿ ಮಿಣಜಗಿ ಕ್ಲಸ್ಟರ್ ವ್ಯಾಪ್ತಿಯ 10 ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಎಸ್ ಡಿ ಎಂ ಸಿ ಉಪಾಧ್ಯಕ್ಷ ಮುತ್ತು ಮನಹಳ್ಳಿ. ಗ್ರಾಪಂ ಸದಸ್ಯರಾದ ಚಂದ್ರಶೇಖರ ಅಲದಿ.ಬಸವರಾಜ ಡೋರನಹಳ್ಳಿ. ಅಮರೇಶ ಪಾಟೀಲ.ಬಸವರಾಜ ಜೀರಲಭಾವಿ. ಉಪಾಧ್ಯಕ್ಷ ರಾಜು ವಡ್ಡರ. ಎಸ್ ಡಿ ಎಂ ಸಿ ಸದಸ್ಯರಾದ ಭೀಮನಗೌಡ ಬಿರಾದಾರ. ಮಲ್ಲಿಕಾರ್ಜುನ ಬೋರಗಿ. ಸಿದ್ದು ಕಾನ್ನಾಳ. ನಿವೃತ್ತ ಶಿಕ್ಷಕ ಎಸ್.ಐ.ಕಡಕೋಳ. ಪ್ರಭುಗೌಡ ಪಾಟೀಲ.ವೀರೇಶ ಬಾಗೇವಾಡಿ. ಲೋಕಣ್ಣ ಸಜ್ಜನ್. ಶ್ರೀಕಾಂತ್ ಬಳಗಾನೂರ. ಇಸಿಓ ಡಿ.ವೈ. ಗುರಿಕಾರ. ಸಿ.ಆರ್. ಸಿ. ಬಾಲಾಜಿ ವಿಜಾಪೂರ. ಮುಖ್ಯ ಶಿಕ್ಷಕ ಆರ್. ಎಂ.ಮುರಾಳ. ಸಹ ಶಿಕ್ಷಕ ಎಸ್. ಎಮ್.ಬೈಚಬಾಳ.ಶಿಕ್ಷಕಿ ಮಡಿವಾಳಮ್ಮ ನಾಡಗೌಡ.ಶಿಕ್ಷಕರಾದ ಸಿ.ಎಸ್. ಸಿದ–ರೆಡ್ಡಿ (ಎಚ್ಪಿಎಸ್ ಮಿಣಜಗಿ). ಎಸ್.ಆರ್. ವಾಲೀಕಾರ (ಎಚ್ಪಿಎಸ್ ಶಿವಪೂರ). ಎಂ.ಬಿ. ಮಡಿವಾಳರ (ಎಚ್ ಪಿ ಎಸ್ ಮೂಕಿಹಾಳ).ಬಿ.ಸಿ.ಮಸರಕಲ್(ಎಚ್ಪಿಎಸ್ ಮಸ್ಕನಾಳ). ಬಿ.ಐ.ಗಣಿಯಾರ (ಎಚ್ಪಿಎಸ್ ಕಲ್ಲದೇವನಹಳ್ಳಿ). ಆರ್.ಎಸ್. ವಾಲೀಕಾರ (ಎಚ್ಪಿಎಸ್ ಮಿಣಜಗಿ).ಜಿ.ಆರ್. ಸೋನಾರ ಮೂಕಿಹಾಳ.ಮಿಣಜಗಿ ವಲಯದಲ್ಲಿ ಬರುವ ಪ್ರಾಥಮಿಕ ಶಾಲೆಗಳ ಕ್ರೀಡಾಳು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಎಂಪಿಎಸ್ ನ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗ ಇದ್ದರು.

# ರಾಜ್ಯಪಾಲರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ವ್ಯಕ್ತಿಗಳ ವಿರುದ್ಧ ಕ್ರಮಕ್ಕೆ ಬಿಜೆಪಿ ಆಗ್ರಹ

**ಬಾಗಲಕೋಟೆ :** ಗೌರವಾನ್ವಿತ ರಾಜ್ಯಪಾಲರ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ ರಾಜ್ಯದಲ್ಲಿ ಕಾಂಗ್ರೆಸ್ ನಾಯಕರುಗಳು ಹಾಗೂ ಬೆಂಬಲಿಗರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಅಗ್ರಹಿಸಿ ಜಿಲ್ಲಾ ಬಿಜೆಪಿ ವತಿಯಿಂದ ಜಿಲ್ಲಾಧಿಕಾರಿಗಳ ಮುಖಾಂತರ ರಾಷ್ಟ್ರಪತಿಗೆ ಮನವಿ ಸಲ್ಲಿಸಿದರು.

ಗುರುವಾರ ನವನಗರದ ಭಾರತೀಯ ಜನತಾ ಪಕ್ಷದ ಕಾರ್ಯಾಲಯದಿಂದ ಜಿಲ್ಲಾಧಿಕಾ-ರಿಗಳ ಕಚೇರಿ ವರೆಗೆ ನಡೆದ ಬೃಹತ್ ಪ್ರತಿಭಟನಾ ಉದ್ದಕ್ಕೂ ಕಾಂಗ್ರೆಸ್ ಸರ್ಕಾರ ವಿರುದ್ಧ ಘೋಷಣೆಗಳನ್ನು ಕೂಗುತ್ತ ಆಕ್ರೋಶ ವ್ಯಕ್ತಪಡಿಸಿದರು.

ಸಂಸದ ಪಿ.ಸಿ.ಗದ್ದಿಗೌಡರ ಮಾತನಾಡಿ ಸಿಎಂ ಸಿದ್ದರಾಮಯ್ಯ ತಮ್ಮ ತಪ್ಪು ಏನು ಇಲ್ಲ ಎಂದರೆ, ರಾಜ್ಯದ ಜನರ ವಿಶ್ವಾಸ ಉಳಿಸಿಕೊಳ್ಳಬೇಕಾದರೆಕೂಡಲೇರಾಜೀನಾಮೆ ನೀಡಿ ನ್ಯಾಯಯುತವಾದ ತನಿಖೆಗೆ ಸಹಕ-ರಿಸಬೇಕೆಂದು ಹೇಳಿದರು. ನೀವು ಮುಖ್ಯಮಂತ್ರಿ ಸ್ಥಾನದಲ್ಲಿರುವಾಗ ಪಾರದರ್ಶಕ ತನಿಖೆ ಮಾಡಲು ಕಷ್ಟ. ಈ ನಿಟ್ಟಿನಲ್ಲಿ ಕೂಡಲೇ ನಿಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಸಲಹೆ ನೀಡಿದರು. ಮುಡಾದಲ್ಲಿ 14 ಸೈಟುಗಳನ್ನು ಯಾವುದೇ ಪ್ರಭಾವ ವ್ಯಕ್ತಿಯಿಲ್ಲದೆ ಡಿನೋಟಿಫಿಕೇಷನ್ ಆಗಲು ಸಾಧ್ಯವಿಲ್ಲ. ಡಿನೋಟಿಫೈ ನಲ್ಲಿ ನೇರವಾಗಿ ನಿಮ್ಮ ಕೈವಾಡ ಇದೆ ಎಂದು ಆರೋಪಿಸಿದರಲ್ಲದೆ ಬಡವರಿಗೆ ಹಂಚಬೇಕಾದ ಸೈಟುಗಳನ್ನು ಕಾನೂನು ಉಲ್ಲಂಘನೆ ಮಾಡಿ, ಅಲ್ಲಿನ ನೀತಿ ನಿಯಮಗಳನ್ನು ಗಾಳಿಗೆ ತೂರಿ ದುಬಾರಿ ಬೆಲೆ ಬಾಳುವ ಜಾಗದಲ್ಲಿ ಸೈಟುಗಳನ್ನು ಪಡೆದು ತಮ್ಮ ಗಮನಕ್ಕೆ ಬಂದಿಲ್ಲ ಎಂದರೆ ಅದು ಹಾಸ್ಯಾಸ್ಪದ ಎಂದು ಹೇಳಿದರು. ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ ನನ್ನ ಮೇಲೆ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲ ಎಂದು ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ



ಸಿದ್ದರಾಮಯ್ಯ ಅವರು ಮೈ ತುಂಬಾ ಕಪ್ಪು ಚುಕ್ಕೆಗಳು ತುಂಬಿದೆ. ವಾಲ್ಮೀಕಿ ಹಗರಣದಲ್ಲಿ 187 ಕೋಟಿ ಭ್ರಷ್ಟಾಚಾರ ಆಗಿದೆ ಎಂದು ಬಿಜೆಪಿ ಆರೋಪಿಸಿದರೆ ಸದನದಲ್ಲಿ ಸಿದ್ದರಾಮಯ್ಯ ಅವರು ಕೇವಲ 89 ಕೋಟಿ ಅವ್ಯವಹಾರ ಆಗಿದೆ ಎಂದು ಹೇಳುತ್ತಿರಿ ನಿಮಗೆ ನಾಚಿಕೆ ಆಗಬೇಕು ಎಂದು ವಾಗ್ದಾಳಿ ನಡೆಸಿದರು.

ಮುಡಾ ಒಂದು ಕರ್ಮ ಕಾಂಡ

ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಮಾತನಾಡಿ ಮುಡಾ ಒಂದು ಬಹುದೊಡ್ಡ ಕರ್ಮಕಾಂಡ ಎಂದು ಹೇಳಿದರು. ಸೈಟು ಹಂಚಿಕೆಯಲ್ಲಿ ನಾಲ್ಕು ಸಾವಿರ ಕೋಟಿಗೂ ಅಧಿಕ ರೂಪಾಯಿಗಳ ಅವ್ಯವಹಾರ ಆಗಿದೆ ಎಂಬುದು ದೃಢಪಟ್ಟಿದೆ. ವಾಸ್ತವವಾಗಿ ಅವ-ರಿಗೆ ಸಿಗಬೇಕಾದದ್ದು 3 ಎಕರೆ 14 ಗುಂಟೆ ಜಾಗ. ಸಿದ್ದರಾಮಯ್ಯ ಅವರೇ ಇದರ ಬದಲಾಗಿ 14 ಸೈಟ್ ಯಾವ ಆಧಾರದ ಮೇಲೆ ಪಡೆದುಕೊಂಡಿರಿ? ಎಂದು ಪ್ರಶ್ನಿಸಿದ ಅವರು ನೈತಿಕತೆ ಹೊತ್ತು ಕೂಡಲೇ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿ ತನಿಖೆ ಎದು-ರಿಸಬೇಕು ಎಂದು ಹೇಳಿದರು.

ಬಿಜೆಪಿ ಜಿಲ್ಲಾ ಅಧ್ಯಕ್ಷ ಎಸ್.ಟಿ. ಪಾಟೀಲ ಮಾತನಾಡಿ ಸಿಎಂ ಸಿದ್ದರಾಮಯ್ಯನವರು ಯಾವುದೇ ಸಭೆಯಲ್ಲಿ ಮಾತನಾಡಬೇಕಾದರೆ ಸಾಮಾನ್ಯವಾಗಿ ನಿಮಗೇನಾದರೂ ನಾಚಿಕೆ ಇದೆಯಾ? ಮಾನ ಇದೆಯಾ? ಲಜ್ಜೆ ಗೆಟ್ಟವರು ಎಂಬ ಮೂರು ಪದಗಳನ್ನು ಬಳಸುತ್ತಾರೆ. ಅದನ್ನು ನೀವೇನಾದರೂ ನಿಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರೆ ಕೂಡಲೇ ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕೆಂದು ಇಲ್ಲವಾದಲ್ಲಿ ಆ ಶಬ್ದಗಳು ನಿಮಗೆ ಅನ್ವಯಿಸುತ್ತದೆ ಎಂದು ಒಪ್ಪಿಕೊಳ್ಳಬೇಕೆಂದು ಆಗ್ರಹಿಸಿದರು. ರಾಜ್ಯ ಸಚಿವ ಸಂಪುಟದ ಸಚಿವರು ಗೌರವಾನ್ವಿತ ರಾಜ್ಯಪಾಲರಿಗೆ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದಾರೆ. ಕಿಂಚಿತ್ತೂ ಗೌರವ ಕೊಡದೆ ಮಾತನಾಡುವುದು ಸರಿಯಾದ ಕ್ರಮವಲ್ಲ. ನೀವು ಭ್ರಷ್ಟಾಚಾರ ಮಾಡಿಲ್ಲ ಎಂದರೆ ನಿರ್ಭಯವಾಗಿ ತನಿಖೆಗೆ ಸಹಕರಿಸಿ ಎಂದು ಹೇಳಿದರು. ಮಾನ್ಯ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶಾಸಕ ಜಗದೀಶ ಗುಡಗಂಟಿ, ಮಾಜಿ ಶಾಸಕ ದೊಡ್ಡನಗೌಡ ಪಾಟೀಲ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ಸೇರಿದಂತೆ ಎಲ್ಲಾ ಮುಂಚೂಣಿ ಘಟಕದ ಪದಾಧಿಕಾರಿಗಳು ಕಾರ್ಯಕರ್ತರು ಪಾಲ್ಗೊಂಡಿದ್ದರು.

# 10 ವರ್ಷ ಕಳೆದರೂ ಇನ್ನು ನಡೆಯದ ಆರ್ & ಆರ್ ವಾಣಿಜ್ಯ ಮಳಿಗೆಗಳ ಹರಾಜು

## ವಾರದಲ್ಲಿ ಆರ್ & ಆರ್ ವಾಣಿಜ್ಯ ಮಳಿಗೆಗಳ ಹರಾಜು ಪೂರ್ಣ: ಎಇಇ ದೇವಾನಂದ





**ಬೀಳಗಿ :** ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಮುಳುಗಡೆ ಸಂತ್ರಸ್ಥರಿಗಾಗಿ ನಿರ್ಮಿಸಲಾದ 09 ವಾಣಿಜ್ಯ ಮಳಿಗೆಗಳ ಹರಾಜು ಪ್ರಕ್ರಿಯೆಯನ್ನು ಈ ಒಂದು ವಾರದಲ್ಲಿ ಪೂರ್ಣಗೊಳಿಸಲಾಗುವುದು ಎಂದು ಆರ್ & ಆರ್ ನಂ:05 ಎಇಇ ದೇವಾನಂದಜುಗುತಿಹೇಳಿದರು.ಗುರುವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು ,ಈ ಹಿಂದೆ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಬ್ಯಾಂಕನಿಂದ ಈ ಕಛೇರಿಗೆ ಡಿ.ಡಿ ಸಲ್ಲಿಸಿದರು,ಆದರೆ ಪ್ರಾರಂಭಿಸುವ ಪೂರ್ವದಲ್ಲಿ ಹಲವಾರು ತಾಂತ್ರಿಕ ಕಾರಣಗಳಿಂದ ಬಹಿರಂಗ ಹರಾಜು ಪ್ರಕ್ರಿಯೆ ಪೂರ್ಣಗೊಳಿಸಲು ಸಾಧ್ಯವಾಗಿರಲಿಲ್ಲ,ಈ ಹಿಂದೆ ಸಲ್ಲಿಸಿರುವ ಡಿ.ಡಿ ಆರು ತಿಂಗಳು ಮೇಲಟ್ಟು ಅವಧಿ ಗತಿಸಿರುವುದರಿಂದ ನವೀಕರಣ ಮಾಡುವುದು ಅವಶ್ಯವಿರುತ್ತದೆ. ಅದ್ದರಿಂದ ತಾವು ಸಲ್ಲಿಸಿರುವ ಡಿ.ಡಿಯನ್ನು ಈ ಕಛೇರಿಯಿಂದ ಪಡೆದುಕೊಂಡು ನವೀಕರಿಸಿ/ಹೊಸ ಡಿ.ಡಿ ಸಲ್ಲಿಸಲು ಸೂಚಿಸಲಾಗಿದೆ,ಒಂದು ವೇಳೆ ನವೀಕರಿಸಿ ಕೊಡದಿದಲ್ಲಿ ತಮಗೆ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಸದರಿ ವಾಣಿಜ್ಯ ಮಳಿಗೆಗಳನ್ನು ಕೃಮೇಯೋ ಅಡಿಯಲ್ಲಿ ಭಾದಿತವಾಗಿ ಸಂತ್ರಸ್ಥರಾದವ-ರಿಗೆ ಹರಾಜಿನಲ್ಲಿ ಭಗವಹಿಸಲು ಅವಕಾಶ ನೀಡುತ್ತಿದ್ದು ಇದು ಅಲ್ಲದೆ ಸರಕಾರದ ಇತ್ತೀಚಿನ ಮಿಸಲಾತಿಗಳನ್ನು ಅಳವಡಿಸಿಕೊಂಡು ಹರಾಜು ಪ್ರಕ್ರಿಯೆನ್ನು ನಡೆಸಲಾಗುತ್ತೆ, ಈಗಾಗಲೇ ಒಟ್ಟು 22 ಅರ್ಜಿದಾರರ ಪೈಕಿ 17 ಜನ ಡಿಡಿ ಕಟ್ಟಿ ರಿನಿವಲ್ ಮಾಡಿಕೊಂಡಿದ್ದಾರೆ ಇನ್ನೂ ಐದು ಜನ ರಿನಿವಲ್ ಮಾಡಿರುವುದಿಲ್ಲ ಆದಷ್ಟು ಬೇಗ ರಿನೀವಲ್ ಮಾಡಿಕೊಳ್ಳಿ ಈ ವಾರದಲ್ಲಿ ಮಳಿಗೆಗಳ ಹರಾಜು ಪ್ರಕ್ರಿಯೆಯನ್ನ ಪೂರ್ಣಗೊಳಿಸುತ್ತೇವೆ ಎಂದು ಹೇಳಿದರು,

ನಂತರ ಸಂತ್ರಸ್ತ ಶಿವನಗೌಡ ಪಾಟೀಲ್ ಮಾತನಾಡಿ,ಕೃಮೇಯೋ ಅಡಿಯಲ್ಲಿ ಮುಳುಗಡೆ ಸಂತ್ರಸ್ಥರಿಗಾಗಿ ಸಣ್ಣಪುಟ್ಟ ವ್ಯಾಪಾರ ಮಾಡುವುದಕ್ಕಾಗಿ ಬೀಳಗಿ ಪಟ್ಟಣಕ್ಕೆ ಹೊಂದಿಕೊಂಡಿರುವ ಕೃಮೇಯೋ ಕಾಲೋನಿಯಲ್ಲಿ 09 ವಾಣಿಜ್ಯ ಮಳಿಗೆಗಳ ಬಹಿರಂಗ ಹರಾಜು ಪ್ರಕ್ರಿಯೆ ಕಳೆದ ಹತ್ತು ವರ್ಷಗಳಿಂದ ನಡದಿಲ್ಲ, ವಾಣಿಜ್ಯ ಮಳಿಗೆಗಳಲ್ಲಿ ಕೆಲವೊಂದಿಷ್ಟು ಸಂತ್ರಸ್ತರಿದ್ದಾರೆ.

ಇನ್ನು ಸಂತ್ರಸ್ತರು ಅಲ್ಲದವರು ಇದ್ದಾರೆ. ಕಳೆದ ವರ್ಷ ಕಚೇರಿಯ ಹೆಸರಿನಲ್ಲಿ ಡಿಡಿ ಕಟ್ಟಿದ್ದೇನೆ ಆ ಸಂದರ್ಭದಲ್ಲಿ ಏಕಾಏಕಿಂ-ಯಾಗಿ ಬಹಿರಂಗ ಹರಾಜು ಪ್ರಕ್ರಿಯೆನ್ನ ತಡೆ ಹಿಡಿಯಲಾಯ್ತು, ಒಂದು ವರ್ಷದಿಂದ ಕಚೇರಿಗೆ ಅಲೆದಾಡುತ್ತಿದ್ದೇವೆ ಇನ್ನುವರೆಗೂ ಹರಾಜು ಪ್ರಕ್ರಿಯೆ ನಡೆಸುತ್ತಿಲ್ಲ, ನಾವು ಮನೆ ಮಠವನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದೇವೆ ನಮ್ಮ ಮಕ್ಕಳಾಗಲಿ ನಾವಾಗಲಿ ಏನೋ ಒಂದು ಸಣ್ಣ ಪುಟ್ಟ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸಬೇಕು ಅಂತ ಅಂದುಕೊಂಡರೆ ಆಗುತ್ತಿಲ್ಲ,ನೀವು ಯಾರಿಗೆ ಕೊಡಿ,ನಿಜವಾದ ಸಂತ್ರಸ್ತರಿಗೆ ಕೊಡಿ,ಈಗಾಗಲೇ ವಾಣಿಜ್ಯ ಮಳಿಗೆಯಲ್ಲಿ ಇದ್ದವರು ಹಾಗೂ ಅಧಿಕಾರಿಗಳ ಹೊಂದಾಣಿಕೆಯಿಂದ ಈ ಬಹಿರಂಗ ಹರಾಜು ಪ್ರಕ್ರಿಯೆ ದಿನವನ್ನು ಮುಂದುವರೆಸಿಕೊಂಡು ಹೊರಟಿದ್ದಾರೆ ಎಂದು ನಮಗೆ ಅನಿಸುತ್ತಿದೆ ಈ ವಾರದಲ್ಲಿ ಹರಾಜು ಪ್ರಕ್ರಿಯೆ ನಡೆದರೆ ಸರಿ ಇಲ್ಲದಿದ್ದರೆ ಕಚೇರಿಗೆ ಬೀಗ ಜಡೆದು ಪ್ರತಿಭಟನೆ ಮಾಡಲಾಗುವುದು ಎಂದು ಹೇಳಿದರು.

# ರಾಖಿ ಶ್ರೀರಕ್ಷೆಯ ಸಂಕೇತ: ಡಾ.ಕಾಜಗಾರ




**ಗುಳೇದಗುಡ್ಡ :** ಭಾರತೀಯರ ಪ್ರತಿಯೊಂದು ಹಬ್ಬವೂ ವಿಶೇಷ ಮಹತ್ವ ಹೊಂದಿವೆ. ರಕ್ಷಾ ಬಂಧನ ಪರ್ವ ಸಹೋದರ ಸಹೋದರಿಯರ ನಡುವೆ ಶ್ರೀರಕ್ಷೆಯ ತತ್ವವನ್ನು ಸಾರುತ್ತದೆ. ಸಹೋದರ ತನ್ನ ಅಕ್ಕ ತಂಗಿಯರ ರಕ್ಷಣೆ ಮಾಡುವ ಸಂಕೇತವಾಗಿ ಕೈಗೆ ರಕ್ಷೆಯನ್ನು ಕಟ್ಟಲಾಗುತ್ತದೆ.

ಇದರಲ್ಲಿ ಯಾವುದೇ ಜಾತಿ, ಮತ, ಪಂಥಗಳಿಲ್ಲದೆ ಎಲ್ಲರೂ ಬಾಂಧವ್ಯದಿಂದ ರಾಖಿಗಳನ್ನು ಕಟ್ಟುತ್ತೇವೆ ಎಂದು ಆರ್.ಎಸ್.ಎಸ್.ದ ಡಾ.ಮಹಾಂತೇಶ ಕಾಜಗಾರ ಹೇಳಿದರು.

ಅವರು ಪಟ್ಟಣದ ಪುರಸಭೆಯಲ್ಲಿ ಸೇವಾ ಭಾರತಿ ವತಿಯಿಂದ ಪೌರಕಾರ್ಮಿಕರಿಗೆ ಆಯೋಜಿಸಿದ್ದ ರಕ್ಷಾ ಬಂಧನ ಕಾರ್ಯಕ್ರಮದಲ್ಲಿ ಮಾತನಾಡಿ, ಸಹೋದ-ರಿಯರು ತಮ್ಮ ಸಹೋದರನ ಹಣೆಗೆ ತಿಲಕ ಹಚ್ಚಿ ಕೈಗೆ ಪವಿತ್ರ ರಾಖಿ ಕಟ್ಟುತ್ತಾರೆ. ಅವರ ಉತ್ತಮ ಆರೋಗ್ಯ ಮತ್ತು ದೀರ್ಘಾಯುಷ್ಯಕ್ಕಾಗಿ ಪ್ರಾರ್ಥಿಸುತ್ತಾಳೆ. ರಕ್ಷಾ ಬಂಧನದ ಪರಿಕಲ್ಪನೆಯು ಮುಖ್ಯವಾಗಿ ರಕ್ಷಣೆಯ ಪರಿಕಲ್ಪನೆಯಾಗಿದೆ.ರಾಖಿ ಹಬ್ಬವು ಸಾರ್ವತ್ರಿಕ ಭ್ರಾತೃತ್ವ ಮತ್ತು ಸಹೋದರತ್ವದ ಆಂಕರಿಕ ಸಂದೇಶವನ್ನು ಸಾರುತ್ತದೆ ಎಂದರು.

ರಾಖಿ ಹಬ್ಬದ ಈ ಕಾರ್ಯಕ್ರಮದಲ್ಲಿ ಸೇವಾ ಭಾರತಿ ಅಧ್ಯಕ್ಷ ಸಂಜಯ ಕಾರಕೂನ, ಕಾರ್ಯಕರ್ತರಾದ ಶಿವಾನಂದ ಜವಳಿ, ವಿಠ್ಠಲ ಪತ್ತಾರ, ಮಲ್ಲಿಕಾರ್ಜುನ ರಾಜನಾಳ, ಪೋಲಿಸಪ್ಪ ರಾಮದುರ್ಗ, ಸುರೇಶ ಗೌಡರ, ವಿಜಯ ಕವಿಶೆಟ್ಟಿ, ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ದುರ್ಗಪ್ಪ ದೊಡಮನಿ, ಉಪಾಧ್ಯಕ್ಷ ಹನಮಂತ ಉಪ್ಪಾರ, ಕಾರ್ಯದರ್ಶಿ ಹನಮಂತ ಮಾದರ ಸೇ-ರಿದಂತೆ ಎಲ್ಲ ಪೌರ ಕಾರ್ಮಿಕರು ಇದ್ದರು.

# ನಸು ನಗುತ್ತಲೇ ನೇಣಿನ ಕುಣಿಕೆಗೆ ಮುತ್ತಿಟ್ಟಿದ್ದ ಕ್ರಾಂತಿಕಾರಿ

ಕೇವಲ ಇಪ್ಪತ್ತೂರರ ಹರೆಯದ ಶಿವರಾಮ ಹರಿ ರಾಜ್ಗುರು ಎಂಬ ಕ್ರಾಂತಿಕಾರಿ ನಸು ನಗುತ್ತಲೇ ನೇಣಿನ ಕುಣಿಕೆಗೆ ತಲೆಯೊಡ್ಡುತ್ತಾನೆ. ಇಂದು ಆ ಕೆಚ್ಚೆದೆಯ ಕಲಿಯ ಜನ್ಮದಿನ. ನಮಗಾಗಿ ಪ್ರಾಣ ಬಲಿದಾನ ನೀಡಿದ ವೀರರನ್ನು ಸ್ಮರಿಸುತ್ತ ಅವರಿಗೊಂದು ನುಡಿನಮನವನ್ನು ಸಲ್ಲಿಸೋಣವೇ..



ಶಿವರಾಮ ಹರಿ ರಾಜ್ಗುರು ಇವರು 24 ಆಗಸ್ಟ್ 1908 ರಂದು ಪುಣೆ ಬಳಿ ಭೀಮಾ ನದಿಯ ದಡದಲ್ಲಿನ ಖೇಡ್ ಎಂಬ ಪ್ರದೇಶದಲ್ಲಿ ಪಾರ್ವತಿ ದೇವಿ ಮತ್ತು ಹರಿನಾರಾಯಣ ರಾಜಗುರು ದಂಪತಿಗಳ ಪುತ್ರನಾಗಿ, ಮರಾಠಿ ದೇಶಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಇವರು ಕೇವಲ ಆರು ವರ್ಷ ವಯಸ್ಸಿನ ಬಾಲಕನಿದ್ದಾಗಲೇ ಇವರ ತಂದೆ ಸ್ವರ್ಗಸ್ಥರಾದರು. ಕುಟುಂಬದ ಜವಾಬ್ದಾರಿ ಅಣ್ಣ ದಿನಕರ್ ಅವರ ಹೆಗಲೇರಿತು. ಖೇಡ್‌ನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದ ಶಿವರಾಮರು ನಂತರ ಪುಣೆಯ ನ್ಯೂ ಇಂಗ್ಲಿಷ್ ಹೈಸ್ಕೂಲ್‌ನಲ್ಲಿ ವಿದ್ಯಾಭ್ಯಾಸ ಮಾಡಿದರು. ಇವರು ಚಿಕ್ಕ ವಯಸ್ಸಿನಲ್ಲೇ ಸೇವಾದಳಕ್ಕೆ ಸೇರಿ ರಾಷ್ಟ್ರಭಕ್ತಿ ಮೆರೆದರು. ಶಿಸ್ತುಬದ್ಧ ಜೀವನಕ್ರಮ ರಾಷ್ಟ್ರೀಯತೆ, ರಾಷ್ಟ್ರಭಕ್ತಿ ಇವುಗಳನ್ನು ಅಳವಡಿಸಿಕೊಂಡಿದ್ದ ಶಿವರಾಮ್ ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಶನ್ನ ಸದಸ್ಯರಾಗಿದ್ದರು. ಏನಾದರೂ ಆಗಲಿ ಹೇಗಾದರೂ ಆಗಲಿ ಭಾರತವನ್ನು ಬ್ರಿಟಿಷ್ ಆಳ್ವಿಕೆಯಿಂದ ಮುಕ್ತಗೊಳಿಸಬೇಕೆಂದು ಹಗಲಿರುಳು ಯೋಚಿಸಿ, ಕಾರ್ಯೋನ್ಮುಖರಾಗಿದ್ದರು. ಹುಲಿಯ ನಡೆ, ಚಾಣಾಕ್ಷನ ಮತಿ, ನರ ನಾಡಿಗಳಲ್ಲಿ ರಾಷ್ಟ್ರಭಕ್ತಿಯಿಂದ ಹರಿಯುತ್ತಿದ್ದ ಬಿಸಿ ನೆತ್ತರು, ನುಡಿಯಲ್ಲಿದ್ದದ್ದು "ವಂದೇ ಮಾತರಂ" ಭಾರತಾಂಬೆಯನ್ನು ದಾಸ್ಯದಿಂದ ಬಂಧಮುಕ್ತಗೊಳಿಸುವ ಕನಸು ಹೊತ್ತಿದ್ದ ಯುವ ಕ್ರಾಂತಿಕಾರಿ ರಾಜಗುರು.

ಭಾರತೀಯರ ಸಂಪತ್ತನ್ನು ಲೂಟಿಗೈಯುತ್ತಿದ್ದ ಅಂಗ್ಲರ ವಿರುದ್ಧ ಅವರದೇ ರೀತಿಯಲ್ಲಿ ಬ್ರಿಟಿಷ್ ರೈಲಿನಲ್ಲಿ ಸಾಗಿಸುತ್ತಿದ್ದ ಹಣವನ್ನು ಕ್ರಾಂತಿಕಾರಿಗಳು ತಮ್ಮ ಚಟುವಟಿಕೆಗಳಿಗಾಗಿ ಮತ್ತು ಸಂಘಟನೆಯನ್ನು ಬಲಪಡಿಸಲು ಲೂಟಿಗೈದರು. ಕಾಕೋರಿ ಪಿತೂರಿಯಲ್ಲಿ ತೊಡಗಿಸಿಕೊಂಡಿದ್ದಕ್ಕಾಗಿ ಇವರನ್ನು ಸ್ಮರಿಸುತ್ತಾರೆ. ರಾಮ್ ಪ್ರಸಾದ್ ಬಿಸ್ಮಿಲ್ ಮತ್ತು ಅಶ್ಫಾಕುಲ್ಲಾ ಖಾನ್ ಅವರಂತಹ ಇತರ ಕ್ರಾಂತಿಕಾರಿಗಳೊಂದಿಗೆ ರಾಜಗುರು ಈ ಧೈರ್ಯಶಾಲಿ ಕಾರ್ಯದಲ್ಲಿ ತಮ್ಮದೇ ಆದ ಪಾತ್ರವನ್ನು ನಿರ್ವಹಿಸಿದರು. ರಾಜಗುರು ವಿವಿದ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಗತ್ ಸಿಂಗ್ ಮತ್ತು ಸುಖದೇವ್ ಥಾಪರ್ ಅವರೊಂದಿಗಿದ್ದರು. ಲಾಲಾ ಲಜಪತ್ ರಾಯ್ ಅವರನ್ನು ಪೋಲೀಸರು ಥಳಿಸಿದ್ದರ ವಿರುದ್ಧ ಸೇಡು ತೀರಿಸಿಕೊಳ್ಳುವುದು ಇವರ ಉದ್ದೇಶವಾಗಿತ್ತು. ಸೈಮನ್ ಆಯೋಗವನ್ನು ಪ್ರತಿಭಟಿಸಿ ಮೆರವಣಿಗೆ ನಡೆಯುತ್ತಿತ್ತು. ಲಾಹೋರ್‌ನಲ್ಲಿ ಬ್ರಿಟಿಷ್ ಪೋಲೀಸ್ ಅಧಿಕಾರಿ, ಜೆ.ಪಿ "ಜಾನ್" ಸ್ಯಾಂಡರ್ಸ್ ಹತ್ಯೆಯಲ್ಲಿ ಈ ಮೂವರು ಭಾಗವಹಿಸಿದರು. ಈ ಮೂಲಕ ಬ್ರಿಟಿಷರ್ ವಿರುದ್ಧ ಸೇಡು ತೀರಿಸಿಕೊಂಡರು. ಇವರನ್ನು ವಿಚಾರಣೆ ಮಾಡಿದ ನ್ಯಾಯಾಲಯವು ಶಿಕ್ಷೆಯನ್ನು ಖಚಿತಪಡಿಸಿತು. ಇವರ ಹೋರಾಟದ ಬರ್ಭತೆಯನ್ನು ಸಹಿಸದ ಆಂಗ್ಲರು ಇವರ ಬದುಕಿಗೆ ಅಂತ್ಯ ಹಾಡಲು ನಿರ್ಧರಿಸಿದರು. ಅಂದು ಮಾರ್ಚ್ 23, 1931, ರಂದು ಇಪ್ಪತ್ತೂರು ವರುಷದ ಹದಿ ಹರೆಯದ ಶಿವರಾಮ್ ರಾಜಗುರು ಇವರನ್ನು ಭಗತ್ ಸಿಂಗ್ ಮತ್ತು ಸುಖದೇವ್ ಅವರೊಂದಿಗೆ ಬ್ರಿಟಿಷ್ ಸರ್ಕಾರವು ಗಲ್ಲಿಗೇರಿಸುವ ಸಿದ್ಧತೆ ಮಾಡಿಕೊಂಡಿತು. ಗಲ್ಲಿಗೇರಿಸುವ ದಿನ ಸಹ ಈ ಮೂವರು ದುಃಖಿಸದೇ, ಖುಷಿಯಿಂದಿದ್ದರು. ಗಲ್ಲು ಸ್ಥಳದ ಪ್ಲಾಟ್ಫಾರಂ ಮೇಲೆ ನಿಂತು ಹಗ್ಗಕ್ಕೆ ಮುತ್ತಿಕ್ಕುತ್ತಾ "ಇಂಕ್ವಿಲಾಬ್ ಜಿಂದಾಬಾದ್" ಘೋಷಣೆ ಮಾಡುತ್ತಾ ಭಗತ್ ಸಿಂಗ್, ಸುಖದೇವ್ ಮತ್ತು ರಾಜಗುರು ಕುಣಿಕೆ ಬಿಗಿದುಕೊಂಡರು. ಅಂದು ಆ ಸೆರೆಮನೆಯಲ್ಲಿ ಸ್ಮಶಾನಮೌನ ಆವರಿಸಿತ್ತು, ಆ ಜೈಲಿನಲ್ಲಿದ್ದ ಯಾರೊಬ್ಬರೂ ಆಹಾರ ಮುಟ್ಟಲಿಲ್ಲ. ಇವರನ್ನು ಗಲ್ಲಿಗೇರಿಸಿದ ವಿಷಯ ತಿಳಿಯದ ಇವರ ಸಂಬಂಧಿಕರು ಭೇಟಿಯಾಗಲು ಬಂದಾಗ ವಿಷಯ ತಿಳಿದು ಗದ್ಗದಿತರಾದರು. ಸಟ್ಲೆಜ್ ನದಿ ತೀರದಲ್ಲಿ ಕ್ರಾಂತಿಕಾರಿಗಳ ದೇಹವನ್ನು ಬ್ರಿಟಿಷರು ರಹಸ್ಯವಾಗಿ ಸುಡುತ್ತಿರುವ ವಿಷಯ ತಿಳಿದು, ಸಾವಿರಾರು ಸಂಖ್ಯೆಯಲ್ಲಿ ಜನ ಸೇರಿದರು. ಅಲ್ಲಿ ದೊರೆತದ್ದು ಅರೆಬರೆ ಸುಟ್ಟ ಕ್ರಾಂತಿಕಾರಿಗಳ ದೇಹದ ಬೂದಿಯಷ್ಟೆ. ಬ್ರಿಟಿಷರು ಈ ತ್ರಿವಳಿ ಕ್ರಾಂತಿಕಾರಿಗಳನ್ನು ಕೊಂದದ್ದು, ಮುಂದೆ ಅವರಿಗೇಯೇ ನಷ್ಟವಾಯಿತು. ಸಾಮ್ರಾಜ್ಯಶಾಹಿ ಭೂಪಟಕ್ಕೆ ತಾವೇ ಈ ತ್ರಿವಳಿ ಕ್ರಾಂತಿಕಾರಿಗಳನ್ನು ನೇಣಿಗೆ ಹಾಕುವುದರ ಮೂಲಕ ತಮ್ಮ ಕನಸಿಗೆ ಚೂರಿಯಿಂದ ತಿವಿದು ಕೊಂಡಂತಾಯಿತು.

ರಾಜಗುರು ಜನಿಸಿದ ಪೂರ್ವಜರ ಮನೆ ಪುಣೆ ನಾಸಿಕ್ ರಸ್ತೆಯಲ್ಲಿ ಭೀಮಾ ನದಿಯ ದಡದಲ್ಲಿದೆ. ಸುಮಾರು 2,788 ಚದರ ಮೀಟರ್ ಭೂಮಿಯಲ್ಲಿ ಹರಡಿರುವ ಈ ಮನೆಯನ್ನು ಶಿವರಾಮ ರಾಜಗುರು ಅವರ ಸ್ಮಾರಕವಾಗಿ ನಿರ್ವಹಿಸಲಾಗುತ್ತಿದೆ. ಸ್ಥಳೀಯ ಸಂಸ್ಥೆ, ಹುತಾತ್ಮ ರಾಜಗುರು ಸ್ಮಾರಕ ಸಮಿತಿ (ಊಖಖ), 2004 ರಿಂದ ಗಣರಾಜ್ಯೋತ್ಸವದಂದು ಇಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವುದರ ಮೂಲಕ ಅವರಿಗೆ ಭಾವಪೂರ್ಣ ನಮನ ಸಲ್ಲಿಸುತ್ತಿದೆ.

ಶಿವರಾಮ ರಾಜಗುರು ಇವರ ಸೇವೆಯನ್ನು ಸ್ಮರಿಸಿ 2013 ರಲ್ಲಿ ಭಾರತದ ಅಂಚೆ ಚೀಟಿಯನ್ನು ಇವರ ಹೆಸರಿನಲ್ಲಿ ಬಿಡುಗಡೆ ಮಾಡಲಾಗಿದೆ.

ಜನ್ಮಸ್ಥಳವಾದ ಖೇಡ್ ಪಟ್ಟಣವನ್ನು ಗೌರವಾರ್ಥಕವಾಗಿ ರಾಜಗುರುನಗರ ಎಂದು ಮರುನಾಮಕರಣ ಮಾಡಲಾಗುದೆ. ರಾಜಗುರುನಗರವು ಮಹಾರಾಷ್ಟ್ರ ರಾಜ್ಯದ ಪುಣೆ ಜಿಲ್ಲೆಯ ಖೇಡ್ ತೆಹಸಿಲ್‌ನಲ್ಲಿರುವ ಒಂದು ಜನಗಣತಿ ಪಟ್ಟಣವಾಗಿದೆ.

ರಾಜಗುರು ಅವರನ್ನು ಸ್ಮರಿಸುವ ಶಹೀದ್ ರಾಜ್ಗುರು ಕಾಲೇಜ್ ಆಫ್ ಅಪ್ಲೈಡ್ ಸೈನ್ಸಸ್ ಫಾರ್ ವುಮೆನ್ ದೆಹಲಿಯ ವಸುಂಧರಾ ಎನ್ಕ್ಲೇವ್‌ನಲ್ಲಿದೆ ಮತ್ತು ಇದು ದೆಹಲಿ ವಿಶ್ವವಿದ್ಯಾಲಯದ ಒಂದು ಘಟಕ ಕಾಲೇಜಾಗಿದೆ. ಇಷ್ಟೆಲ್ಲಾ ಸಾಧನೆ ಮಾಡಿದ ಸ್ವಾತಂತ್ರ್ಯ ಹೋರಾಟಗಾರರ ಹೆಸರು ಎಷ್ಟು ಜನಕ್ಕೆ ತಿಳಿದಿದೆ. ನಮ್ಮ ಶಾಲಾ ಪಠ್ಯ ಪುಸ್ತಕಗಳಲ್ಲಿ ಕೇವಲ ಬೆರಳೆಣಿಕೆಯಷ್ಟು ಜನ ಸ್ವಾತಂತ್ರ್ಯ ಹೋರಾಟಗಾರರ ಹೆಸರು ಮಾತ್ರ ಓದಿದ ನೆನಪುಗಳು. ನಾವುಗಳು ಸ್ವಾತಂತ್ರ್ಯ ಸಂಗ್ರಾಮದ ಹಿಂದಿನ ಕೆಚ್ಚದೆಯ ಕಲಿಗಳ ಹೋರಾಟ, ಜೀವನಗಾಥೆ ಮತ್ತು ತಾಯಿ ಭಾರತಾಂಬೆಯನ್ನು ಬಂಧ ಮುಕ್ತಗೊಳಿಸಲು ಅವರು ನೀಡಿದ ಜೀವ ಬಲಿದಾನಗಳ ಬಗ್ಗೆ ಓದಲೇ ಇಲ್ಲ ಎನ್ನುವುದಕ್ಕಿಂತ ಈ ವಿಷಯಗಳನ್ನು ನಮ್ಮ ಪಠ್ಯ ಪುಸ್ತಕಗಳಲ್ಲಿ ಏಕೆ ಸೇರಿಸಲಿಲ್ಲ ಎನ್ನುವ ಪ್ರಶ್ನೆ ಸದಾ ಕಾಡುತ್ತದೆ. ವಿದೇಶಿಯರ ಆಕ್ರಮಣ, ಭಾರತದ ಸಂಪತ್ತಿನ ಲೂಟಿ ಇವುಗಳ ಬಗ್ಗೆ ಮಾಹಿತಿಯಿರುವ ಪಠ್ಯವನ್ನು ಓದಿದಾಗ ನಮ್ಮ ದೇಶದಲ್ಲಿ ಬೆರಳೆಣಿಕೆಯ ವಿದೇಶಿ ಲೂಟಿಕೋರರನ್ನು ಎದುರಿಸುವ ತಾಕತ್ತು ಇರಲಿಲ್ಲವೇ ಅಥವಾ ಅವರೊಂದಿಗೆ ಸೇರಿ ನಮ್ಮವರ ವಿರುದ್ಧವೇ ಕತ್ತಿ ಮಸೆಯುವ ಹುನ್ನಾರವಿತ್ತೇ? ಹೀಗೆ ಕಾಡುವ ಸಾವಿರಾರು ಪ್ರಶ್ನೆಗಳು ನಮ್ಮ ನಿಮ್ಮಲ್ಲೂ ಉದ್ಭವಿಸಬಹುದು. ಪ್ರಶ್ನೆಗಳಿಗೆ ಅಲ್ಪವಿರಾಮ ನೀಡಿ, ನಮ್ಮ ದೇಶದ ವೀರ ಖ್ರಾಂಮತಿಕಾರಿ ಶಿವರಾಮ್ ರಾಜಗುರು ಅವರಿಗೆ ಅವರ ಜನ್ಮದಿನದಂದು ಅಭಿಮಾನದ ನಮನ ಸಲ್ಲಿಸೋಣ. ಮತ್ತೆ ಹುಟ್ಟಿ ಬನ್ನಿ ರಾಜಗುರು, ಇಂದು ಹಿಂದಿಗಿಂತ ನಿಮ್ಮಂತಹ ಕೆಚ್ಚೆದೆಯ ಕಲಿಗಳ ಅವಶ್ಯಕತೆ ಇದೆಯೆಂದು ತಾಯಿ ಭಾರತಾಂಬೆಯ ಮಕ್ಕಳು ಕೂಗಿ ಕರೆಯುತ್ತಿದ್ದಾರೆ.

**ಜೈ ಹಿಂದ್... ವಂದೇ ಮಾತರಂ**



ಲತಾ ಕೆ.ಎಸ್.ಹೆಗಡೆ
**ಬೆಂಗಳೂರು**

# ಕ್ರೀಡಾಕೂಟದಲ್ಲಿ ತಾಲೂಕು ಮಟ್ಟಕ್ಕೆ ಆಯ್ಕೆ



**ತೇರದಾಳ :** ಇಲ್ಲಿನ ಸಿದ್ದೇಶ್ವರ ವಿದ್ಯಾವರ್ಧ ಸಂಘದಲ್ಲಿ ನಡೆದ ಪಶ್ಚಿಮ ವಲಯದ ಎಚ್‌ಪಿಎಸ್ ಶಾಲೆಗಳ ಕ್ರೀಡಾಕೂಟದಲ್ಲಿ ಸಸಾಲಟ್ಟಿ ರಸ್ತೆಯ ಬಸವನ ಗುಡಿ ಸರಕಾರಿ ಎಚ್‌ಪಿಎಸ್ ಶಾಲೆ ವಿದ್ಯಾರ್ಥಿಗಳು ಹಲವು ಕ್ರೀಡೆಗಳಲ್ಲಿ ಜಯ ಗಳಿಸಿ ತಾಲೂಕು ಮಟ್ಟಕ್ಕೆ ಆಯ್ಕೆಗೊಂಡಿದ್ದಾರೆ. ಗುಂಪು ಆಟಗಳಲ್ಲಿ ಬಾಲಕಿಯರ ವಿಭಾಗ ಥ್ರೋ ಬಾಲ್, ವಾಲಿಬಾಲ್ ಹಾಗೂ ರಿಲೇ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ವೈಯಕ್ತಿಕ ವಿಭಾಗದ ಗುಂಡು, ಚಕ್ರ ಎಸೆತ, 100 ಮೀಟರ ಓಟ ಹಾಗೂ ಅಡೆ-ತಡೆ ಓಟದಲ್ಲಿ ಸವಿತಾ ಹೊಸಮನಿ ಪ್ರಥಮ,

ಹಾಗೂ ಅಮೃತಾ ಬಾಳಿಕಾಯಿ ಎತ್ತರ ಜಿಗಿತದಲ್ಲಿ ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಗೊಂಡಿದ್ದಾರೆ.

# ಬ್ರಹ್ಮಶ್ರೀ ನಾರಾಯಣಗುರು ಜಯಂತಿ: ಪುಷ್ಪನಮನ ಸಲ್ಲಿಕೆ



**ಕೊಪ್ಪಳ :** ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಗಸ್ಟ್ 20ರಂದು ಜಿಲ್ಲಾ ಮಟ್ಟದ ಬ್ರಹ್ಮಶ್ರೀ ನಾರಾಯ-ಣಗುರು ಅವರ ಜಯಂತಿ ಆಚರಿಸಲಾಯಿತು.

ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ಬ್ರಹ್ಮಶ್ರೀ ನಾರಾಯಣಗುರು ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಅರ್ಪಿಸಿ ಗೌರವ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ್ ಮರಬನಳ್ಳಿ,

ಸಮಾಜದ ಮುಖಂಡರಾದ ಈರಣ್ಣ ಹುಲಿಗಿ, ರವಿ ಗಿಣಿಗೇರ, ವೆಂಕಟೇಶ್ ಗಂಗಾವತಿ, ಹನುಮಂತಪ್ಪ ಕಂಪಸಾಗರ, ಚಂದ್ರು ಈಳಿಗೇರ್, ಮಂಜುನಾಥ ಈಳಿಗೇರ್, ಅಶೋಕ, ಬಸವರಾಜ ಸೇರಿದಂತೆ ಜಿಲ್ಲಾಧಿಕಾರಿ ಕಚೇರಿಯ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಮತ್ತಿತರರು ಇದ್ದರು.

## ಹುಬ್ಬಳ್ಳಿ-ಧಾರವಾಡ: ಮೀಟರ್ ಬಡ್ಡಿ ಕುಳಗಳಿಗೆ ಬಿಸಿ ಮಹಾನಗರದಲ್ಲಿ ಹಲವಾರು ಪ್ರಕರಣ ದಾಖಲು: ಚೆಕ್, ಆಯುಧ, ದಾಖಲಾತಿ ವಶ



**ಹುಬ್ಬಳ್ಳಿ :** ಹು-ಧಾ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಮೀಟರ್ ಬಡ್ಡಿ ದಂಧೆ ನಡೆಸುವವರ ವಿರುದ್ಧ ಒಟ್ಟು 7 ಪ್ರಕರಣಗಳನ್ನು ದಾಖಲಿಸಿ ಆರೋಪಿತರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಹು-ಧಾ ಪೊಲೀಸ್ ಆಯುಕ್ತರಾದ ಎನ್.ಶಶಿಕುಮಾರ್ ಅವರು ತಿಳಿಸಿದ್ದಾರೆ.

ನಗರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾರ್ವಜನಿಕರಿಂದ ಬಂದಂತಹ ದೂರಿನ ಆಧಾರದ ಮೇರೆಗೆ ಹು-ಧಾ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಮೀಟರ್ ಬಡ್ಡಿ ದಂಧೆಕೋರರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದರು.

ಧಾರವಾಡದ ವಿದ್ಯಾಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 4 ಆರೋಪಿಗಳ ಮೇಲೆ 2 ಪ್ರಕರಣ ದಾಖಲು ಮಾಡಿದ್ದು, ಹುಸೇನಸಾಬ್ ದೊಡ್ಡಮನಿ, ಅರ್ಬಾಜ ಮಕ್ತುಮಸಾಬ, ರಿಜ್ವಾನ್ ಬೆಟಗೇರಿ, ಅಮೀರ್ ಮುಲ್ಲಾನಿ ಇವರಿಂದ ಬಾಂಡ್ ಪೇಪರ್ ಗಳು, ಖಾಲಿ ಚೆಕ್, ಸಾಲದ ಮಾಹಿತಿಯಿರುವ ಬುಕ್ ಹಾಗೂ ಒತ್ತೆ ಇಟ್ಟುಕೊಂಡ 1 ಸ್ಕೂಟಿ ಮತ್ತು ವಾಹನದ ಮೂಲ ದಾಖಲಾತಿಗಳನ್ನು ವಶಪಡಿಸಿಕೊಳ್ಳಲಾಗಿದೆ.

ಧಾರವಾಡ ಶಹರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 4 ಆರೋಪಿಗಳ ಮೇಲೆ 2 ಪ್ರಕರಣ ದಾಖಲು ಮಾಡಿದ್ದು, ಜಾಫರ್, ಧಾರವಾಡ ನಿಜಾಮುದ್ದೀನ್ ಕಾಲೋನಿಯ ಮೊಪಿನ, ಸವಿತಾ ಕಳ್ಳಿಮನಿ, ರತ್ನವ್ವ ಗಂಭೀರ ಇವರಿಂದ ಒಂದು ಹೊಂಡಾ ಕಂಪನಿ ಬೈಕ್ ವಶಪಡಿಸಿಕೊಳ್ಳಲಾಗಿದೆ ಎಂದರು.

ಧಾರವಾಡ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 5 ಆರೋಪಿಗಳ ಮೇಲೆ 2 ಪ್ರಕರಣ ದಾಖಲಾಗಿದ್ದು, ಚಕ್ರಪಾಣಿ ಕುಲಕರ್ಣಿ, ಕಷ್ಣೂದಿನ ಕಿಲ್ಲೇದಾರ, ಮಸೂದ್ದಿನ ಕಿಲ್ಲೆದಾರ ಹಾಗೂ ಇನ್ನೂ ಇಬ್ಬರನ್ನು ಬಂಧಿಸಲಾಗುವುದು ಎಂದ ಅವರು 3 ಬಾಂಡ್ ಗಳು ಹಾಗೂ 3 ಖಾಲಿ ಚೆಕ್ ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.

ಹುಬ್ಬಳ್ಳಿಯ ಬೆಂಡಿಗೇರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 12 ಆರೋಪಿತರ ಮೇಲೆ 1 ಪ್ರಕರಣ ದಾಖಲಾಗಿದ್ದು, ಆದಿತ್ಯ ಸಣ್ಣತಂಗಿ, ಮಯೂರ ಚಾಕಲಬ್ಬಿ, ಮಹಾಂತೇಶ್ ಹೊಸಮನಿ, ಅಭಿಷೇಕ ಪಗಲಾಪೂರ, ಅರ್ಜುನ ಗಾಯಕವಾಡ, ಕೈಬೂಸಾಬ ಮುಲ್ಲಾ, ಅಜಯ ಸಿಂಗನಹಳ್ಳಿ, ಆನಂದ ಗೋಕಾಕ್, ಮಂಜುನಾಥ ಕೊರವರ, ಕಿರಣ್ ಕೊರವರ, ಕಿರಣ್ ದಾಮೋದರ್ ಹಾಗೂ ಗಣೇಶ್ ಇವರಿಂದ ಇವರಿಂದ ಸಾಲದ ವ್ಯವಹಾರದ ನಮೂದಿಸುವ ದಾಖಲೆಗಳು, 10 ವಿವಿಧ ಕಂಪನಿಯ ಮೊಬೈಲ್ ಫೋನ್ ಗಳು, 8 ದ್ವಿಚಕ್ರ ವಾಹನಗಳು, 2 ಆಯುಧಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.

ಮೂವರ ಬಂಧನ :

ಹುಬ್ಬಳ್ಳಿಯ ಕಾರವಾರ ರಸ್ತೆಯ ಗಿರಣಿಚಾಳದಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕೊಠಡಿ ಗೋಡೆ ಕೆಡವಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ದುಷ್ಕರ್ಮಿಗಳನ್ನು ಉಪನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದಾಜೀಬಾನ್ ಪೇಟ್ ನಿವಾಸಿಗಳಾದ ಪ್ರಶಾಂತ, ಕಾರ್ತಿಕ ಹಾಗೂ ತೊರವಿಹಕ್ಕಲನ ವಿವೇಕ ಎಂಬುವವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ. ಇನ್ನೂ ಸೋಮವಾರ ತಡರಾತ್ರಿ ಈ ಮೂವರು ಕಾರ್ ಡ್ರೈವಿಂಗ್ ಕಲಿಯಲು ಶಾಲೆ ಮುಂದಿರುವ ಮೈದಾನಕ್ಕೆ ಬಂದಿದ್ದರು, ಅದರಲ್ಲಿರುವ ಒರ್ವ ಡ್ರೈವಿಂಗ್ ಮಾಡುವ ಸಂದರ್ಭದಲ್ಲಿ ಏಕಾಏಕಿ ಶಾಲೆಯ ಗೋಡೆಗೆ ಡಿಕ್ಕಿ ಹೊಡೆದಿದ್ದಾನೆ. ಅಷ್ಟೇ ಅಲ್ಲದೇ ಕಾರಿನ ಲೈಟ್ ಹಾಗೂ ಇತರ ವಸ್ತುಗಳು ಸ್ಥಳದಲ್ಲಿ ಬಿದ್ದಿದ್ದವು. ಈ ಆಧಾರದ ಮೇರೆಗೆ ವಿಚಾರಣೆ ನಡೆಸಿದಾಗ ತಪ್ಪು ಮಾಡಿರುವುದಾಗಿ ಬಾಯಿ ಬಿಟ್ಟಿದ್ದಾರೆಂದರು.

## ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 155ನೇ ಜಯಂತಿಯ ದಿನಾಚರಣೆ: ಗಾಂಧೀಜಿ ಪ್ರಬಂಧ ಸ್ಪರ್ಧೆ

**ಧಾರವಾಡ :** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಆಚರಿಸುತ್ತಿರುವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 155ನೇ ಜಯಂತಿಯ ದಿನಾಚರಣೆಯ ಅಂಗವಾಗಿ ಪ್ರೌಢಶಾಲಾ, ಕಾಲೇಜು ಹಾಗೂ ಪದವಿ ವಿದ್ಯಾರ್ಥಿಗಳಿಗಾಗಿಏರ್ಪಡಿಸಲಾಗುತ್ತಿರುವ ಪ್ರಬಂಧ ಸ್ಪರ್ಧೆಯನ್ನು ಅಚ್ಚು ಕಟ್ಟಾಗಿ ನಿರ್ವಹಿಸುವಂತೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ವರೂಪ ಟಿ.ಕೆ ತಿಳಿಸಿದರು.

ಜಿಲ್ಲಾ ಮಟ್ಟದಲ್ಲಿ ಪ್ರಬಂಧ ಸ್ಪರ್ಧೆ ಏರ್ಪಡಿಸುವ ನಿಟ್ಟಿನಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಉಪನಿರ್ದೇಶಕರು, ಪದವಿ ಕಾಲೇಜು ಶಿಕ್ಷಣ ಹಾಗೂ ಜಿಲ್ಲಾ ವಾರ್ತಾಧಿಕಾರಿಗಳ ಸಮಿತಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಹಾತ್ಮಾ ಗಾಂಧೀಜಿಯವರು ಇಡೀ ಜಗತ್ತೇ ನಿಬ್ಬೆರಗಾಗುವಂತೆ ಇನ್ನೊಬ್ಬರಿಗಾಗಿ ಬದುಕನ್ನು ಸವಿಸಿದ ಮಹಾನ್ ಚೇತನ. ಗಾಂಧೀಜಿಯವರ ವಿಚಾರಧಾರೆಗಳನ್ನು ಹೊಸ ಪೀಳಿಗೆಗೆ ಪರಿಚಯಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಈ ನಿಟ್ಟಿನಲ್ಲಿ ವಿದ್ಯಾರ್ಥಿ ಹಾಗೂ ಯುವ ಜನರಲ್ಲಿ ಗಾಂಧೀಜಿಯವರ ಬದುಕು, ಸ್ವಾತಂತ್ರ ಚಳುವಳಿ, ಸರಳತೆ, ಅಹಿಂಸಾ ಮಾರ್ಗ, ಅಸ್ಪ್ರಶ್ಯತೆ ನಿವಾರಣೆಗಾಗಿ ನಡೆಸಿದ ಪ್ರಯೋಜನಗಳು ಇತ್ಯಾದಿ ವಿಚಾರಗಳ ಬಗ್ಗೆ ವಾರ್ತಾ ಇಲಾಖೆಯು ಪ್ರಬಂಧ ಸ್ಪರ್ಧೆ ಏರ್ಪಡಿಸಿದ್ದು ಪ್ರಶಂಸಾರ್ಹನಿಯವಾಗಿದ್ದು ಎಲ್ಲ ಶಿಕ್ಷಣ ಇಲಾಖೆಯ ಅಧಿಕಾರಿಗಳು ಅಚ್ಚುಕಟ್ಟಾಗಿ ನಿರ್ವಹಿಸುವಂತೆ ತಿಳಿಸಿದರು.



ಎಲ್ಲ ಶಿಕ್ಷಣ ವಿಭಾಗದ ಅಧಿಕಾರಿಗಳು ಈ ಪ್ರಬಂಧ ಸ್ಪರ್ಧೆ ಕುರಿತು ವಾಟ್ಸಪ್ ಗ್ರೂಪ್ ಒಂದನ್ನು ರಚಿಸಿ ಸಂಪನ್ಮೂಲ ವ್ಯಕ್ತಿಗಳಿಂದ ಕಾಲಕಾಲಕ್ಕೆ ವಿದ್ಯಾರ್ಥಿಗಳಿಗೆ ಸಲಹೆ ನೀಡುವಂತೆ ತಿಳಿಸಿದರು.

ಪ್ರಬಂಧ ಸ್ಪರ್ಧೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದಜಿಲ್ಲಾವಾರ್ತಾಧಿಕಾರಿ ಮಂಜುನಾಥ ಸುಳ್ಳೊಳ್ಳಿ ವಿವಿಧ ವಿಭಾಗಗಳ ಸ್ಪರ್ಧೆಗಳ ಕುರಿತಾದ ವಿಷಯಗಳ ಬಗ್ಗೆ ನಿಭಂದನೆಗಳಬಗ್ಗೆಹಾಗೂಬಹುಮಾನಗಳ ಕುರಿತು ವಿವರಿಸಿದರು.

ವಿವಿಧ ವಿಷಯಗಳ ಕುರಿತು ಪ್ರೌಢಶಾಲೆ, ಪದವಿ ಪೂರ್ವ ಶಿಕ್ಷಣ ಹಾಗೂ ಪದವಿ-ಸ್ನಾತಕೋತ್ತರ ಪದವಿಗಳ ಹಂತದ ವಿದ್ಯಾರ್ಥಿಗಳಿಗೆ ಒಟ್ಟು 3 ವಿಭಾಗಗಳಲ್ಲಿ ಬಾಪೂಜಿ ಪ್ರಬಂಧ ಸ್ಪರ್ಧೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಆಯೋಜಿಸಲು ಉದ್ದೇಶಿಸಲಾಗಿದೆ. ವಿಜೇತರಿಗೆ ರಾಜ್ಯಮಟ್ಟದಲ್ಲಿ ಪ್ರಥಮ 31 ಸಾವಿರ ರೂ. ದ್ವಿತೀಯ 21 ಸಾವಿರ ರೂ. ಮತ್ತು ತೃತೀಯ 11 ಸಾವಿರ ರೂ.

ಹಾಗೂ ಜಿಲ್ಲಾಮಟ್ಟದಲ್ಲಿ ಪ್ರಥಮ 3 ಸಾವಿರ ರೂ. ದ್ವಿತೀಯ 2 ಸಾವಿರ ರೂ ಮತ್ತು ತೃತೀಯ 1 ಸಾವಿರ ರೂ. ಬಹುಮಾನ ನೀಡಲಾಗುವುದು.

ಪ್ರೌಢ ಶಾಲಾ ವಿಭಾಗ : 1) ಮಹಾತ್ಮ ಗಾಂಧೀಜಿ ಹಾಗೂ ಪ್ರಜಾಪ್ರಭುತ್ವ, 2) ಗಾಂಧೀಜಿಯವರ ವಿಚಾರದಲ್ಲಿ ಸತ್ಯಾಗ್ರಹ, 3) ನನ್ನ ಬದುಕಿನಲ್ಲಿ ಗಾಂಧೀಜಿ ತತ್ವಗಳನ್ನು ಅಳವಡಿಸಿಕೊಳ್ಳುವ ಬಗೆ, 4) ಗಾಂಧೀಜಿಯವರ ತತ್ವಗಳಿಂದ ದೇಶ ಕಟ್ಟುವ ಬಗೆ, ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳು ಈ ನಾಲ್ಕು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು ಸುಮಾರು 900 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಬೇಕು.

ಪದವಿ ಪೂರ್ವ ಶಿಕ್ಷಣ ವಿಭಾಗ: 1) ಮಹಾತ್ಮ ಗಾಂಧೀಜಿ ಹಾಗೂ ಪ್ರಜಾಪ್ರಭುತ್ವ, 2) ದೇಶದ ಕಳಂಕವಾದ ಅಸ್ಪೃಶ್ಯತೆ ನಿವಾರಿಸುವಲ್ಲಿನ ಗಾಂಧೀಜಿಯವರ ಪ್ರಯೋಗಗಳು, 3) ಗಾಂಧೀಜಿಯವರನ್ನು ಜಗತ್ತು ಗ್ರಹಿಸಿದ ರೀತಿ, 4) ನನ್ನ ಬದುಕಿನಲ್ಲಿ ಗಾಂಧೀಜಿ ತತ್ವಗಳನ್ನು ಅಳವಡಿಸಿಕೊಳ್ಳುವ ಬಗೆ, ಪದವಿ ಪೂರ್ವ ಶಿಕ್ಷಣ ವಿಭಾಗದ ವಿದ್ಯಾರ್ಥಿಗಳು ಈ ನಾಲ್ಕು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು ಸುಮಾರು 1500 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಬೇಕು.

ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗ :- 1) ಇಂದಿನ ಪ್ರಜಾಪ್ರಭುತ್ವದಲ್ಲಿ ಸತ್ಯಾಗ್ರಹದಮಹತ್ವ,2)ದೇಶನಿರ್ಮಾಣದಲ್ಲಿ ಗಾಂಧೀಜಿಯವರ ಜಾತ್ಯಾತೀತ ನಿಲುವುಗಳು, 3) ಗಾಂಧೀಜಿಯವರ ಧಾರ್ಮಿಕ ಸಹಿಷ್ಣುತೆ ಚಿಂತನೆ, ಸ್ವಾತಂತ್ರ್ಯ ಮತ್ತು ಸಮಾನತೆಯ ಪರಿಕಲ್ಪನೆಗಳು, 4) ಗಾಂಧೀಜಿಯವರ ವಿಚಾರದಲ್ಲಿ ಸತ್ಯದ ಪರಿಕಲ್ಪನೆ, 5) ಗಾಂಧೀಜಿಯವರು ಕಂಡ ಸ್ವರಾಜ್ಯಮತ್ತುಆರ್ಥಿಕಚಿಂತನೆಗಳು. ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗದ ವಿದ್ಯಾರ್ಥಿಗಳು ಈ ಐದು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು ಸುಮಾರು 2000 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಬೇಕು.

ದಿನಾಂಕ:06-09-2024 ರೊಳಗಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಜಿಲ್ಲಾಡಳಿತದ ಸಹಯೋಗದೊಂದಿಗೆ ಸ್ಪರ್ಧೆ ಏರ್ಪಡಿಸಿ ದಿನಾಂಕ : 10-09-2024 ರೊಳಗಾಗಿ ಮೌಲ್ಯಮಾಪನ ಮಾಡಿ, ವಿಜೇತರ ವಿವರಗಳು ಹಾಗೂ ಪ್ರಬಂಧಗಳನ್ನು ಕೇಂದ್ರ ಕಚೇರಿಗೆ ಕಳುಹಿಸಲಿದೆ. ಜಿಲ್ಲಾಮಟ್ಟದ ಪ್ರಥಮಬಹುಮಾನವಿಜೇತಪ್ರಬಂಧಗಳನ್ನು ರಾಜ್ಯಮಟ್ಟದಲ್ಲಿ ಮರುಮೌಲ್ಯಮಾಪನ ಮಾಡಿ, ರಾಜ್ಯಮಟ್ಟದ ಫಲಿತಾಂಶ ಘೋಷಿಸಲಾಗುವುದು.

ಪ್ರತಿ ವಿಭಾಗದಲ್ಲಿನ ಅತ್ಯುತ್ತಮವಾದ ಮೂರು (3) ಪ್ರಬಂಧಗಳಿಗೆ ಅಕ್ಟೋಬರ್ 02 ರಂದು ಜಿಲ್ಲಾ ಮಟ್ಟದ ಗಾಂಧೀ ಜಯಂತಿ ದಿನಾಚರಣೆ ಸಂದರ್ಭದಲ್ಲಿ ಬಹುಮಾನ ನೀಡಿ ಪ್ರಬಂಧ ರಚನೆಕಾರರಿಗೆ ಗೌರವಿಸಲಾಗುವುದು.

ಡಿಡಿಪಿಯು ಕೆ.ಸುರೇಶ, ಡಿಡಿಪಿಐ ಕಚೇ-ರಿಯ ವಿಷಯ ನಿರ್ವಾಹಕ ರೇಖಾ ಬಜಂತ್ರಿ ಹಾಗೂ ಕಾಲೇಜು ಶಿಕ್ಷಣ ಇಲಾಖೆ ಸಹಾಯಕ ನಿರ್ದೇಶಕ ಸಂತೋಷ ಕಾಣ-ಕೋಣಕರ ಸಭೆಯಲ್ಲಿ ಉಪಸ್ಥಿತರಿದ್ದರು.

## ತರಬೇತಿ ಪಡೆಯಲು ವಯಸ್ಸಿನಗಿಂತ ಮನಸ್ಸು ಮುಖ್ಯ: ಮೋಹನ ಲಿಂಬಿಕಾಯಿ

**ನವಲಗುಂದ :** ಇಂದಿನ ಡಿಜಿಟಲ್ ಯುಗದಲ್ಲಿ ನಾವು ಎಷ್ಟೇ ಪರಿಣಿತರಿದ್ದರು ನಮಗೆ ತರಬೇತಿ ಅತ್ಯವಶ್ಯ ಆದರೆ ತರಬೇತಿ ಪಡೆಯಲು ವಯಸ್ಸಿನಗಿಂತ ಮನಸ್ಸು ಮುಖ್ಯ ಎಂದು ಮಾಜಿ ವಿಧಾನ ಪರಿಸತ್ ಸದಸ್ಯರಾದ ಮೋಹನ ಲಿಂಬಿಕಾಯಿ ಹೇಳಿದರು

ಅವರು ಪಟ್ಟಣದ ಪಿಎಲ್ ಡಿ ಬ್ಯಾಂಕಿನ ಶ್ರೀ ಶಂಕರಗೌಡ ಶಲವಡಿ ಸಭಾಭವನದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲ ಬೆಂಗಳೂರು ಜಿಲ್ಲಾ ಸಹಕಾರ ಯೂನಿಯನ್ ಧಾರವಾಡ,

ಕೆ. ಸಿ. ಸಿ. ಬ್ಯಾಂಕ್ ಧಾರವಾಡ ಹಾಗೂ ಸಹಕಾರ ಇಲಾಖೆ, ಇವರುಗಳ ಸಂಯುಕ್ತ ಆಶ್ರಯದಲ್ಲಿ ತಾಲೂಕಿನ ಪ್ಯಾಕ್ಸ್ ಸೋಸಾಯಟಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.



ಕೆ.ಸಿ ಸಿ ಬ್ಯಾಂಕಿನ ಮಾಜಿ ಅಧ್ಯಕ್ಷ ಬಾಪುಗೌಡ ಪಾಟೀಲ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಯೂನಿಯನ್ ಅಧ್ಯಕ್ಷ ಶಂಕರಪ್ಪ ರಾಯನಾಳ, ನಿರ್ದೇಶಕರಾದ ಪಕ್ಕೀರಗೌಡ ಕಲ್ಲನಗೌಡ್ರ, ಮುಖ್ಯಕಾರ್ಯ ನಿರ್ವಹಣಾಧಿಕಾರಿ ಸವಿತಾ ಹಿರೇಮಠ, ಪ್ರಾಚಾರ್ಯರಾದ ವೆಂಕಟರಮಣ, ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ ಗುರುಶಾಂತಗೌಡ ಪಾಟೀಲ್ ಉಪಾಧ್ಯಕ್ಷ ಲಕ್ಷ್ಮಣ ನೀಡವಣಿ, ನಾಗನಗೌಡ ಪಾಟೀಲ್ ಸೇರಿದಂತೆ ಜಿಲ್ಲಾ ಯೂನಿಯನ್ ಅಧ್ಯಕ್ಷರು ಪದಾಧಿಕಾರಿಗಳು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ರಾಜ್ಯಪಾಲರ ನಡೆ ಖಂಡನೀಯ: ಕೌಜಲಗಿ



**ಬೈಲಹೊಂಗಲ :** ಪಾರದರ್ಶಕ ಆಡಳಿತದ ಮೂಲಕ ಎರಡನೇ ಬಾರಿ ರಾಜ್ಯದ ಚುಕ್ಕಾಣಿ ಹಿಡಿದಿರುವ ಸಿಎಂ ಸಿದ್ದರಾಮಯ್ಯ ನವರ ವಿರುದ್ಧ ತರಾತುರಿಯಲ್ಲಿ ಪ್ರಾಸಿಕ್ಯೂಶನ್ ಗೆ ರಾಜ್ಯಪಾಲರು ಅನುಮತಿ ನೀಡಿರುವುದು ಖಂಡನೀಯವೆಂದು ಶಾಸಕ ಮಹಾಂತೇಶ ಕೌಜಲಗಿ ಹೇಳಿದರು.

ಪಟ್ಟಣದಲ್ಲಿ ತಮ್ಮ ಕಾರ್ಯಕರ್ತರೊಂದಿಗೆ ಪ್ರತಿಭಟನೆ ನಡೆಸಿ ಉಪವಿಭಾಗಾಧಿಕಾರಿಗಳ ಮೂಲಕ ರಾಷ್ಟಪತಿ ಗಳಿಗೆ ಮನವಿ ಸಲ್ಲಿಸಿ ಮಾಧ್ಯಮಗಳೊಂದಿಗೆ ಅವರು ಮಾತನಾಡಿದರು.

ಈ ಸಂದರ್ಬದಲ್ಲಿ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ,ಶಿವರುದ್ರಪ್ಪ ಹಟ್ಟಿಹೊಳಿ, ಶಂಕರಗೌಡ ಪಾಟೀಲ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ, ಕಾರ್ತಿಕ ಪಾಟೀಲ,ಜಿಲ್ಲಾ ಗ್ರಾಮೀಣ ಕಾರ್ಯದರ್ಶಿ ಉಮೇಶ ಬೊಳೆತ್ತಿನ,

ತಾಲೂಕಾ ಗ್ಯಾರಂಟಿ ಸಮೀತಿ ಅದ್ಯಕ್ಷ, ಮಹಾಂತೇಶ ಕಳ್ಳಿಬಡ್ಡಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ,ವಿಜಯಕುಮಾರ ದಳವಾಯಿ,ದಾದಾಪಿರ್ ಜಮಾದಾರ,ಜುನೆದ ಕಡಬಿ,ಪ್ರೀತಮ ಬೆಳಗಾವಿ,ಸಮಿ ಮಕಾನದಾರ, ಶ್ರೀಕಾಂತ ಸುಂಕದ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತಿದ್ದರು.

## ದಲ್ಲಾಳಿಗಳ ಹಾವಳಿಗೆ ಕಡಿವಾಣ ಹಾಕಿ

**ಚನ್ನಮ್ಮನ ಕಿತ್ತೂರು :** ಕಿತ್ತೂರು ತಾಲೂಕಿಗೆ ಒಳಪಡುವ ಒಂದಿಷ್ಟು ಕಛೇರಿಗಳು ಸೇರಿದಂತೆ ಉಪನೊಂದಣಿ ಕಛೇರಿಗಳಲ್ಲಿ ದಲ್ಲಾಳಿಗಳ ಹಾವಳಿ ಹೆಚ್ಚಾಗಿದ್ದು ಇದಕ್ಕೆ ಕಡಿವಾಣ ಹಾಕಬೇಕಾದರೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕೆಂದು ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು.

ಸ್ಥಳೀಯ ತಾಪಂ ಸಭಾಭವನದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ದೀಪ ಬೆಳಗಿಸಿ ಮಾತನಾಡಿದವರು ಕೆರೆಗಳಿಗೆ ನೀರು ತುಂಬಿಸಲು ಈಗಾಗಲೇ ಪ್ರಾರಂಭವಾಗಿದ್ದು ಅವುಗಳು ಬಸಿಯದಂತೆ ನೋಡಿಕೊಳ್ಳಿ ಎಂದು ಹೇಳಿ ಕೆರೆ ಸರ್ವೇ ಮಾಡಲು ಸರ್ವೇ ಇಲಾಖೆಯವರಿಗೆ ಸೂಚಿಸಿದರು.

ಕೆಲವೊಂದಿಷ್ಟು ಶಾಲೆಗಳಲ್ಲಿ ಶೌಚಾಲಯವಿದ್ದರೂ ಇಲ್ಲದಂತಾಗಿದೆ. ಶಿಕ್ಷಕರಿಗೆ ಮಕ್ಕಳಿಗೆ ತೊಂದರೆಯಾಗುತ್ತಿದೆ. ದಾಖಲೆಯಲ್ಲಿ ಮಾತ್ರ ಶೌಚಾಲಯ ಹೆಸರಿದ್ದು, ಅವುಗಳು ಉಪಯೋಗಕ್ಕೆ ಬಾರದಂತಾಗಿವೆ. ಅಂತಹವುಗಳನ್ನು ಮಾಹಿತಿ ಪಡೆದು ನೂತನವಾಗಿ ನಿರ್ಮಿಸಲು ಕ್ರಮ ಜರುಗಿಸಬೇಕೆಂದು ಶಿಕ್ಷಣಾಧಿಕಾರಿಗಳಿಗೆ ಖಡಕ್ ಆದೇಶ ನೀಡಿದರು.

ಅರಣ್ಯ ಇಲಾಖೆಯವರಿಂದ ರೈತರು ಸಸಿಗಳನ್ನು ಖರೀದಿಸಿ ಹಚ್ಚುತ್ತಾರೆ. ಆದರೆ ಅದು ಬೆಳೆಯುವುದಿಲ್ಲ. ರೈತರು ನಷ್ಟಕ್ಕೊಳಗಾಗುತ್ತಾರೆ. ಅದಕ್ಕಾಗಿ ನರ್ಸರಿಯಿಂದಲೇ ಸಸಿ ಖರೀದಿಸಿದ ರಶೀದಿ ಪಡೆದುಕೊಳ್ಳಬೇಕು. ರೈತರಿಗೆ ಇದರ ನಷ್ಟವಾದರೆ ನರ್ಸರಿ ಕಂಪನಿಯವರೇ ಭರಿಸಬೇಕು ಎಂದರು.



ಕೃಷಿ ಇಲಾಖೆಯವರು ರೈತರಿಗೆ ಇಲಾಖೆಯಿಂದ ದೊರೆಯುವ ಸೌಲಭ್ಯ ಮಾಹಿತಿ ನೀಡಲು ಆಯಾ ಗ್ರಾಪಂದಲ್ಲಿ ಸಭೆ ಕರೆಯಲು ಅಧಿಕಾರಿಗಳಿಗೆ ಹೇಳಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರಿಂದ ಅಂಗನವಾಡಿ ಕಾರ್ಯಕರ್ತರಿಗೆ ಸ್ಮಾರ್ಟ ಪೋನ್, ವಿಶೇಷಚೇತನರಿಗೆ ಕಿವಿ ಮಶಿನ್, ಊರುಗೋಲು ವಿತರಿಸಿದರು.

ಈ ವೇಳೆ ತಾಲೂಕಾಡಳಿತ ಪಶುಸಂಗೋಪನಾ ಇಲಾಖೆ ಉಪ ನಿರ್ದೇಶಕ ರಾಜೀವ ಕೋಲೇರ, ತಹಶೀಲ್ದಾರ ರವೀಂದ್ರ ಹಾದಿಮನಿ, ತಾಪಂ ಇಓ ಕಿರಣ ಗೋರ್ಪಡೆ, ತಾಲೂಕ ಮಟ್ಟದ ಅಧಿಕಾರಿಗಳು ಸೇರಿದಂತೆ ತಾಪಂ ಸಿಬ್ಬಂದಿ, ಸಾರ್ವಜನಿಕರಿದ್ದರು. ನಿರೂಪಣೆ-ಸ್ವಾಗತ ಪಿಡಿಓ ರಾಜಶ್ರೀ ಪಟ್ಟಣಶೆಟ್ಟಿ, ವಂದನಾರ್ಪನೆ ಅಕ್ಷರ ದಾಸೋಹ ಪ್ರಕಾಶ ಮೆಳವಂಕಿ ಉಪಸ್ಥಿತರಿದ್ದರು.

## ಹಿಂದುಳಿದ ವರ್ಗಗಳಿಗೆ ದಿಸೆ ನೀಡಿದ ಅರಸು ಅವರನ್ನು ಸ್ಮರಿಸುವದು ನಮ್ಮೆಲ್ಲರ ಕರ್ತವ್ಯ: ಈರಣ್ಣ ಕಡಾಡಿ

**ಬೆಳಗಾವಿ :** ಹಿಂದುಳಿದ ವರ್ಗಗಳಿಗೆ ಒಂದು ದಿಸೆಯನ್ನು ನೀಡಿದಂತಹ ಮಹಾನ ಚೇತನರು ಹಾಗೂ ಹಿಂದುಳಿದ ವರ್ಗ ಎಂದು ಗುರುತಿಸುವ ಜನರಿಗೆ ಗೌರವದ ಬದುಕನ್ನು ಕಟ್ಟಿಕೊಳ್ಳಲು ಪ್ರಥಮವಾಗಿ ಪ್ರಯತ್ನಿಸಿದ ಡಿ ದೇವರಾಜ ಅರಸು ಅವರನ್ನು ಸ್ಮರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ರಾಜ್ಯ ಸಭಾ ಸದಸ್ಯರಾದ ಈರಣ್ಣ ಕಡಾಡಿ ನುಡಿದರು.

ನಗರದಕುಮಾರಗಂಧರ್ವರಂಗಂಮದಿರದಲ್ಲಿ (ಆ.20)ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಹಿಂದುಳಿದವರ್ಗಗಳಕಲ್ಯಾಣಇಲಾಖೆಹಾಗೂ ಮಹಾನಗರ ಪಾಲಖೆ ಸಂಯುಕ್ತಾಶ್ರಯದಲ್ಲಿ ಜರುಗಿದ ಡಿ.ದೇವರಾಜ ಅರಸು ರವರ 109ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಡಿ.ದೇವರಾಜ ಅರಸು ಅವರು ತಮ್ಮ ಮುಖ್ಯಮಂತ್ರಿಗಳ ಆಡಳಿತಾವಧಿಯಲ್ಲಿ ಶೋಷಿತರನ್ನು ಮುಖ್ಯವಾಹಿನಿಗೆ ತರುವಲ್ಲಿ ಎಲ್ಲ ವಿರೋಧಗಳನ್ನು ಮೀರಿ ಪ್ರಯತ್ನಿಸಿ ತಮ್ಮ ಛಾಪನ್ನು ಮೂಡಿಸಿದ್ದರು ಎಂದರು.

ಅರಸುರವರು ಸಮಾಜದ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಅನೇಕ ಕ್ರಾಂತಿಕಾರಿಕ ಬದಲಾವಣೆಗಳನ್ನು ತಂದರು. ಜೀತ ಪದ್ಧತಿ ನಿರ್ಮೂಲನೆ, ಮಲ ಹೊರುವ ಪದ್ಧತಿಯಂತಹ ಅನೇಕ ಅನಿಷ್ಠ ಪದ್ಧತಿಗಳನ್ನು ತೊಡದು ಹಾಕಲು ಪ್ರಮುಖ ನಿರ್ಣಯಗಳನ್ನು ತೆಗೆದುಕೊಂಡಂತಹ ಮಹಾನುಭಾವರಾಗಿದ್ದರು.

ಇಂದು ಸರಕಾರಗಳು ಶೋಷಿತರ ಅಭ್ಯುಧ್ಯಯಕ್ಕಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸುತ್ತಿವೆ.ಈಯೋಜನೆಗಳುಅರ್ಹರಿಗೆ ತಲುಪವಂತಹ ಕಾರ್ಯವಾಗಬೇಕಾಗಿದೆ. ಈ ನಿಟ್ಟಿನಲ್ಲಿ ಹಿಂದುಳಿದ ವರ್ಗಗಳ ಸಮುದಾಯಗಳು ಜಾಗೃತವಾಗಿ ಸರಕಾರದ ಯೋಜನೆಗಳ ಸೌಲಭ್ಯಗಳನ್ನು ಪಡೆದು-ಕೊಂಡು ಆರ್ಥಿಕ, ಶೈಕ್ಷಣಿಕವಾಗಿ ಸಮಾಜದ ಮುನ್ನೆಲೆಗೆ ಬರುವಂತೆ ಕರೆ ನೀಡಿದರು.

ಅಧಿಕಾರಿದಲ್ಲಿರುವಂತಹವರು ಸರಕಾರದ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳಿಸುವದರ ಮೂಲಕ ಸಮಾಜದಲ್ಲಿ ಸಮಾನತೆ ತರಬಹುದಾಗಿದೆ ಎಂದು ಈರಣ್ಣ ಕಡಾಡಿ ಅಭಿಪ್ರಾಯ ಪಟ್ಟರು.

**ಜಿಲ್ಲಾ ಉಸ್ತುವಾರಿ ಸಚಿವರ ಸಂದೇಶ**

ಡಿ. ದೇವರಾಜ ಅರಸು ಅವರು ರಾಜ್ಯದ ಮುಖ್ಯಮಂತ್ರಿಗಳಾಗಿ ನಾಡಿನ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಯಹರಿಕಾರಎಂದೇಪ್ರಖ್ಯಾತಿಯಾದ ಹಾಗೂ ರಾಜ್ಯ ಕಂಡಂತಹ ಧೀಮಂತ ರಾಜ-ಕಾರಣಿಯಾಗಿದ್ದರು.

ನಾಡಿನ ಹಿಂದುಳಿದ ವರ್ಗಗಳ ಏಳಿಗೆಗಾಗಿ ಸ್ಥಾಪಿಸಿದ ಹಿಂದುಳಿದ ವರ್ಗಗಳ ಆಯೋಗದ ಪ್ರತಿಫಲದಿಂದಾಗಿ ಇಂದು ನಾಡಿನ ಅಸಂಖ್ಯಾತ ಹಿಂದುಳಿದ ವರ್ಗದ ಜನರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಏಳಿಗೆ ಹೊಂದಲು ಸಾಧ್ಯವಾಗಿದೆ. ಇವರು ಜಾರಿಗೆ ತಂದ ಭೂಸುಧಾರಣೆಗಳು, ಗೇಣಿ ಶಾಸನ ಹಾಗೂ ಉಳುವವನೆ ಭೂಮಿಯ ಒಡೆಯ ಎಂಬ ಕಾನೂನುಗಳು ಶ್ರಮಿಕ



ರೈತಾಪಿ ಕೂಲಿ ವರ್ಗದವರನ್ನು ಗೇಣಿದಾರರ ಕಪಿಮುಷ್ಠಿಯಿಂದ ಬಿಡಿಸಿ ಭೂ ಒಡೆಯನನ್ನಾಗಿ ಮಾಡಿದ ಕೀರ್ತಿ ದೇವರಾಜ ಅರಸುರವರಿಗೆ ಸಲ್ಲುತ್ತದೆ.

ಇಂತಹ ಮಹಾನ್ ನೇತಾರರ ತತ್ವ ಆದರ್ಶಗಳನ್ನು ನಮ್ಮಲ್ಲಿ ಮೈಗೂಡಿಸಿಕೊಂಡು ಅವರಆಶೋತ್ತರಗಳನ್ನುಸಾಕಾರಗೊಳಿಸುವಲ್ಲಿ ಶ್ರಮಿಸೋಣ ಎಂಬ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಅವರ ಸಂದೇಶವನ್ನು ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ ಅವರು ವಾಚಿಸಿದರು.

ಜಿ.ಪಂ.ಉಪಕಾರ್ಯದರ್ಶಿ ಬಸವರಾಜ ಹೆಗನಾಯಕ ಮಾತನಾಡಿ, ರಾಜ್ಯದಲ್ಲಿನ ಹಿಂದುಳಿದ ವರ್ಗಗಳ ಇಲಾಖೆಯಡಿಯಲ್ಲಿನ ವಸತಿ ನಿಲಯಗಳು ಉತ್ತಮವಾಗಿವೆ. ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಒಳ್ಳೆಯ ಶಿಕ್ಷಣ ಪಡೆದುಕೊಳ್ಳುವದರ ಮೂಲಕ ದೇಶದಉನ್ನತಸ್ಥಾನಮಾನಪಡೆದುಕೊಳ್ಳುವಂತೆ ತಮ್ಮಬಾಲ್ಯದ ನೆನಪುಗಳನ್ನು ಮೆಲಕು ಹಾಕುತ್ತಾ ವಿಧ್ಯಾರ್ಥಿಗಳಿಗೆ ಪ್ರೋತ್ಸಾಹಿಸಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಯಕ್ಕುಂಡಿಯ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಡಾ.ವಾಯ್.ಎಮ್ ಯಾಕ್ಕೊಳಿ ಅವರು, ಡಿ.ದೇವರಾಜ ಅರಸು ರವರ ಜೀವನ ಸಾಧನೆ ಕುರಿತು ಮಾತನಾಡುತ್ತಾ ಡಿ.ದೇವರಾಜ ಅರಸು ಅವರು ತಮ್ಮ ಮುಖ್ಯ ಮಂತ್ರಿಗಳ ಆಡಳಿತಾವದಿಯಲ್ಲಿ ಬಡವರು, ಶೋಷಿತರು ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಶ್ರಮಿಸಿದ್ದರು. ಸಮಾಜದಲ್ಲಿನ ಹಿಂದುಳಿದ ವರ್ಗದವರು ಸಮಾಜದ ಮುಖ್ಯವಾಹಿನಿಗೆ ಬರಬೇಕಾದರೆ ಶೈಕ್ಷಣಿಕವಾಗಿ ಮುಂದೆ ಬರುವದು ಅವಶ್ಯಕ ಎಂದು ಮನಗಂಡ ಅವರು ಹಿಂದುಳಿದ ವರ್ಗದವರಿಗಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯನ್ನು ಜಾರಿಗೊಳಿಸಿದರು.

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ತಮ್ಮ ಜೀವನ ಮುಡಿಪಾಗಿಡುವದರ ಜೊತೆಗೆ ತಮ್ಮ ಆಡಳಿತಾವಧಿಯಲ್ಲಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿದ್ದು ಇಂದು ನಾವೆಲ್ಲ ಅವರನ್ನು ಮಾದರಿಯಾಗಿಟ್ಟುಕೊಳ್ಳಬೇಕು ಎಂದು ವಾಯ್.ಎಮ್ ಯಾಕ್ಕೊಳಿ ನುಡಿ-ದರು.

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಶಿವಪ್ರಿಯಾ ಕಡೇಚೂರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನಂದಗಡದ ಸಂಗೊಳ್ಳಿ ರಾಯಣ್ಣ ಸ್ಮಾರಕ ಶಾಲೆಯ ವಿಧ್ಯಾರ್ಥಿಗಳು ನಾಡಗೀತೆ ಹಾಗೂ ಪ್ರಾರ್ಥನೆ ಪ್ರಸ್ತುತಿಸಿದರು. ಶ್ರೀಮತಿ ಸುನಿತಾ ದೇಸಾಯಿ ಕಾರ್ಯಕ್ರಮ ನಿರ್ವಹಿಸಿದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ:

ಡಿದೇವರಾಜ ಅರಸು ರವರ 109ನೇ ಜನ್ಮ ದಿನಾಚರಣೆಯ ವೇದಿಕೆ ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ, ವಿವಿಧ ಕ್ರೀಡೆಗಳಲ್ಲಿ, ಪ್ರಬಂಧ,

ರಸಪ್ರಶ್ನೆ ಸ್ಪರ್ಧೆಗಳಲ್ಲಿ ವಿಜೇತ ವಿಧ್ಯಾರ್ಥಿಗಳಿಗೆ ಗಣ್ಯರುಗಳು ಪ್ರಶಸ್ತಿ ಪತ್ರ ನೀಡುವದರ ಮೂಲಕ ಗೌರವಿಸಿದರು.

ಕಾರ್ಯಕ್ರಮದಲ್ಲಿ ಬೆಳಗಾವಿ ಉತ್ತರ ಶಾಸಕರಾದ ರಾಜು(ಆಸಿಫ)ಸೇಠ, ಪಾಲಿಕ ಆಯುಕ್ತರಾದ ಅಶೋಕ ದುಡಗುಂಟಿ, ಡಿ.ದೇವರಾಜಅರಸುಅಭಿವೃದ್ಧಿನಿಗಮದಜಿಲ್ಲಾ ವ್ಯವಸ್ಥಾಪಕರಾದ ಎಸ್.ನ್.ಬಾನಸಿ,ವಿವಿಧ ಶಾಲಾ ಮಕ್ಕಳು, ವಸತಿ ಶಾಲಾ ಮಕ್ಕಳು,ಗಣ್ಯರು, ಸಮಾಜದ ಮುಖಂಡರು, ಸಾರ್ವಜನಿಕರು ಉಪಸ್ಥಿತರಿದ್ದರು.

ದೇವರಾಜ ಅರಸು ಭಾವಚಿತ್ರದ ಮೆರವಣಿಗೆ:

ಕಾರ್ಯಕ್ರಮಕ್ಕೂ ಮುನ್ನ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಡಿ.ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಆಕರ್ಷಕ ಮೆರವಣಿಗೆಗೆ ಜಿಲ್ಲಾಧಿಕಾರಿ ಮೊಹಮ್ಮದ್‌ರೋಷನ್‌ಅವರುಚಾಲನೆನೀಡಿ-ದರು. ವಿವಿಧ ಜಾನಪದ ಕಲಾತಂಡಗಳೊಂದಿಗೆ ಪ್ರಾರಂಭವಾದ ಮೆರವಣಿಗೆಯು ಜಿಲ್ಲಾಧಿಕಾರಿಗಳ ಕಚೇರಿಯಿಂದ ಕುಮಾರ ಗಂಧರ್ವ ರಂಗಮಂದಿರಕ್ಕೆ ಆಗಮಿಸಿ ಸಮಾರೋಪಗೊಂಡಿತು. ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಮೆರವಣಿಗೆಗೆ ಸಾಥ್ ನೀಡಿದರು.

## ಉದ್ಘಾಟನೆಗೊಳ್ಳದ ಅವಳಿ ನಗರದ ಬಸ್ ನಿಲ್ದಾಣಗಳು । ಪ್ರಯಾಣಿಕರಿಗೆ ಕನಿಷ್ಠ ಸೌಲಭ್ಯಗಳಿಲ್ಲ

# ಮೂತ್ರಾಲಯ ಸೌಲಭ್ಯವಿಲ್ಲದೇ ಪ್ರಯಾಣಿಕರ ಪರದಾಟ!






* ಶಿವಾನಂದ ಪಿ.ಮಹಾಬಲಶೆಟ್ಟಿ.

**ರಬಕವಿ-ಬನಹಟ್ಟಿ** : ರಬಕವಿ-ಬನಹಟ್ಟಿ ಅವಳಿ ನಗರಗಳಿಗೆ ಮಂಜೂರಾಗಿದ್ದ ನೂತನ ಬಸ್‌ನಿಲ್ದಾಣಗಳ ಕಾಮಗಾರಿ ಪೂರ್ಣಗೊಂಡಿದ್ದರೂ ಇನ್ನೂ ಸಾರಿಗೆ ಸಚಿವರಿಗೆ ಸಮಯವಿಲ್ಲದ ಕಾರಣಕ್ಕೆ ಎರಡೂ ಬಸ್‌ನಿಲ್ದಾಣಗಳು ಸಾರ್ವಜನಿಕರಿಗೆ ಲೋಕಾರ್ಪಣೆಗೊಳ್ಳಲು ಉದ್ಘಾಟನೆಗಾಗಿ ಅಂದಿನ ರಾಮನಿಗಾಗಿ ಕಾದ ಶಬರಿಯಂತೆ ಇಂದಿನ ರಾಮಲಿಂಗಾರೆಡ್ಡಿಯವರ ಬರುವಿಕೆಗೆ ಕಾದು ಕುಳಿತಿವೆ.

ನೇಕಾರಿಕೆ ಉದ್ಯಮ ಪ್ರಧಾನವಾಗಿರುವ ಅವಳಿ ನಗರಗಳ ವರ್ತಕರಿಗೆ, ಸಾರ್ವಜನಿಕರಿಗೆ, ಶಾಲಾ ಮಕ್ಕಳಿಗೆ ಮತ್ತು ಹಿರಿಯ ನಾಗರಿಕರಿಗೆ ಈ ಎರಡೂ ನಿಲ್ದಾಣಗಳಲ್ಲಿ ಕುಳಿತುಕೊಳ್ಳಲು ಆಸನಗಳೇ ಇಲ್ಲವಾಗಿವೆ. ಈ ಪೂರ್ವದಲ್ಲಿದ್ದ ಆಸನಗಳನ್ನು ಕಿತ್ತು ಹಾಕಿರುವ ಸಾರಿಗೆ ಇಲಾಖೆ ಅಧಿಕಾರಿಗಳ ಅಧ್ವಾನದಿಂದ ಪ್ರಯಾಣಿಕರು ಮಳೆ, ಗಾಳಿ, ಬಿಸಿಲೆನ್ನದೇ ನಿಲ್ದಾಣದ ಹೊರಭಾಗದಲ್ಲಿಯೇ ಕುಳಿತು ಸಾರಿಗೆ ಇಲಾಖೆಗೆ ಹಿಡಶಾಪ ಹಾಕುವಂತಾಗಿದೆ. ಹಳೆಯ ಶೌಚಾಲಯಗಳನ್ನು ಕೆಡವಿ ಹಾಕಿರುವ ಮತ್ತು ನೂತನ ನಿರ್ಮಿತ ಶೌಚಾಲಯ ಮತ್ತು ಮೂತ್ರಾಲಯಗಳಿಗೆ ಅಡ್ಡಲಾಗಿ ಟ್ಯಾಂಕ್ ಇರಿಸಿರುವ ಸಾರಿಗೆ ಇಲಾಖೆಯ ಘನಂದಾರಿ ಅಧಿಕಾರಿಗಳ ಕ್ರಮದಿಂದ ಪ್ರಯಾಣಿಕರು ಅದರಲ್ಲೂ ಮಹಿಳೆಯರು ಮೂತ್ರ ವಿಸರ್ಜಿಸಲು ಮತ್ತು ಶೌಚಕ್ಕೆ ತೆರಳಲಾಗದೇ ಪರದಾಡುವಂತಾಗಿದೆ. ನಿಲ್ದಾಣದಲ್ಲಿ ಪ್ರಯಾಣಿಕರಿಗೆ ದಿನನಿತ್ಯ ಆಗುತ್ತಿರುವ ತಾಪತ್ರಯಗಳಿಗೆ ಸ್ಪಂದಿಸುವವರೇ ಇಲ್ಲದಂತಾಗಿದೆ. ಅವಳಿ ನಗರಗಳ ಬಸ್‌ನಿಲ್ದಾಣಗಳಲ್ಲಿನ ಸಾರಿಗೆ ನಿಯಂತ್ರಕರು ಈ ಮೊದಲು ಉದ್ಘಾಟನೆಯಾಗದ ಕಾರಣ ನಿಲ್ದಾಣದ ಹೊರವಲಯದಲ್ಲೇ ಕುಳಿತು ಕೆಸಲ ನಿರ್ವಹಿಸುತ್ತಿದ್ದರು. ಆದರೆ ರಬಕವಿಯ ಸಾರಿಗೆ ನಿಯಂತ್ರಕರು ಉದ್ಘಾಟನೆಯಾಗದಿದ್ದರೂ ನಿಯಂತ್ರಕರ ಕೊಠಡಿಯಲ್ಲಿ ಕುಳಿತು ಉದ್ಘೋಷಗಳ ಜೊತೆಗೆ ಗೀತಮಾಲಾ ಹಾಕುತ್ತ ಕುಳಿತ ಕಾರಣ ಬನಹಟ್ಟಿಯ ನಿಯಂತ್ರಕರೂ ತಮ್ಮ ಕೊಠಡಿಯಲ್ಲೇ ಕುಳಿತು ಕಾರ್ಯಭಾರ ಮಾಡುತ್ತಿದ್ದಾರೆ. ಆದರೆ ದುಡ್ಡು ಕೊಟ್ಟು ಪ್ರಯಾಣಿಸುವವರು ಮಾತ್ರ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿ ಬಸ್‌ನಿಲ್ದಾಣಗಳಲ್ಲಿ ಹೊರಭಾಗದಲ್ಲೇ ಕುಳಿತುಕೊಳ್ಳುವಂತಾಗಿದೆ. ನಿಲ್ದಾಣಗಳಲ್ಲಿ ಆಸನಗಳ ಅಳವಡಿಕೆ ಮತ್ತು ಮೂತ್ರಾಲಯಗಳ ಬಳಕೆಗೆ ಅವಕಾಶ ನೀಡುವಂತೆ ಸಾರಿಗೆ ಅಧಿಕಾರಿಗಳು ವ್ಯವಸ್ಥೆಗೊಳಿಸಬೇಕೆಂಬುದು ಸಾರ್ವಜನಿಕರ ಒಕ್ಕೊರಲಿನ ಬೇಡಿಕೆಯಾಗಿದೆ.

> ರಬಕವಿ ಬಸ್‌ನಿಲ್ದಾಣದಲ್ಲಿ ಸುವ್ಯವಸ್ಥಿತವಾಗಿದ್ದ ನಗರಸಭೆ ಅಳವಡಿಸಿದ್ದ ಆಸನಗಳನ್ನು ಒಡೆದುಹಾಕಿರುವ ಸಾರಿಗೆ ಇಲಾಖೆ ಅಧಿಕಾರಿಗಳ ಕ್ರಮದಿಂದ ಪ್ರಯಾಣಿಕರು ಕುಳಿತುಕೊಳ್ಳಲೂ ಜಾಗವಿಲ್ಲದಂತಾಗಿದೆ. ಮೊದಲಿದ್ದ ಶೌಚಾಲಯ ಮತ್ತು ಮೂತ್ರಾಲಯಗಳನ್ನು ಉದ್ಘಾಟನೆವರೆಗಾದರೂ ಕೆಡವಿಹಾಕದೇ ಕಾಯ್ದುಕೊಂಡಿದ್ದರೆ ವೃದ್ಧರು, ಮಹಿಳೆಯರಿಗೆ ತಾಪತ್ರಯವಾಗುತ್ತಿರಲಿಲ್ಲ ಆದರೆ ನೂತನ ಮೂತ್ರಾಲಗಳ ಬಾಗಿಲಿಗೆ ಟ್ಯಾಂಕ್ ಇರಿಸಿ ಬಂದ್ ಮಾಡಿದ್ದರಿಂದ ಪ್ರಯಾಣಿಕರು ಅದರಲ್ಲೂ ಮಹಿಳೆಯರಿಗೆ ತೊಂದರೆಯಾಗುತ್ತಿದೆ. ಸುತ್ತಲೂ ಬಡಾವಣೆಗಳಿರುವುದರಿಂದ ಮತ್ತು ಬಯಲಾಗಿರುವುದರಿಂದ ಜಲಬಾಧೆ ತೀರಿಸಿಕೊಳ್ಳಲಾಗುತ್ತಿಲ್ಲ. ಕನಿಷ್ಠ ಪ್ರಜ್ಞೆಯೇ ಇಲ್ಲದ ಸಾರಿಗೆ ಅಧಿಕಾರಿಗಳು ಸಮಸ್ಯೆಗೆ ಪರಿಹಾರ ನೀಡುವತ್ತ ನೂತನ ಶೌಚಗೃಹ ಮತ್ತು ಮೂತ್ರಾಲಯ ಬಳಕೆಗೆ ಅವಕಾಶ ಕಲ್ಪಿಸಬೇಕು.
>
> । ಪ್ರಕಾಶ ಸುಢಾಳ ಹಿರಿಯ ನಾಗರಿಕರು, ರಬಕವಿ

**ಸಾರಿಗೆ ನಿಯಂತ್ರಕರಿಗೂ ಸೂಸು ಮಾಡಲು ಸಮಸ್ಯೆ!** : ಪವಿತ್ರ ಶುಕ್ರವಾರದಂದೇ ರಬಕವಿಯ ಸಾರಿಗೆ ನಿಯಂತ್ರಕರು ಜಲಬಾಧೆ ತೀರಿಸಿಕೊಳ್ಳಲು ಬಸ್‌ನಿಲ್ದಾಣದ ಪಕ್ಕದಲ್ಲೇ ನಿಂತಿರುವ ದೃಶ್ಯ ಪತ್ರಿಕೆಯ ಕ್ಯಾಮರಾ ಕಣ್ಣಿಗೆ ಬಿತ್ತು. ಶೌಚಾಲಯ ಸಾರ್ವಜನಿಕರ ಬಳಕೆಗೆ ಯಾಕೆ ಮುಕ್ತಗೊಂಡಿಲ್ಲವೆಂದು ಪ್ರಶ್ನಿಸಿದಾಗ ವಿಭಾಗೀಯ ನಿಯಂತ್ರಣಾಧಿಕಾರಿಗಳ ಆದೇಶದಡಿ ಟೆಂಡರ್‌ದಾರನು ಇನ್ನೂ ಚಾಲನೆ ಕೊಟ್ಟಿಲ್ಲವಾದ್ದರಿಂದ ಸಮಸ್ಯೆಯಾಗಿದೆ ಎಂದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಸ್ಥಳೀಯ್ದ ಪ್ರಯಾಣಿಕರು ಮಳೆನೀರಿನ ಆಸರೆಗಾಗಿ ಒಳಬದಿ ನಿಂತಿದ್ದ ಪ್ರಯಾಣಿಕರನ್ನು ಹೊರಗೋಡಿಸಿದ ನಿಯಂತ್ರಕರ ಅಮಾನವೀಯ ವರ್ತನೆಯನ್ನು ಮತ್ತು ಉದ್ಘಾಟನೆಯಾಗದ ಬಸ್‌ನಿಲ್ದಾಣದಲ್ಲಿ ಸಾರಿಗೆ ನಿಯಂತ್ರಕರ ಕೊಠಡಿಯಲ್ಲಿ ಕುಳಿತು ಬಿನಾಕಾ ಗೀತಮಾಲಾ ಹಾಕುತ್ತ ಮನರಂಜನೆ ಜೊತೆ ಕಾರ್ಯ ನಿರ್ವಹಿಸುವುದನ್ನು ಬಿಟ್ಟು ನೀವ್ಯಾಕೆ ಮೊದಲಿನಂತೆ ಹೊರಭಾಗದಲ್ಲೇ ಕುಳಿತುಕೊಳ್ಳುವುದಿಲ್ಲ ಎಂದು ತರಾಟೆಗೆ ತೆಗೆದುಕೊಂಡರು. ದಿ.17ರ ಶನಿವಾರದಂದು ಜಮಖಂಡಿ ಡಿಪೋ ವ್ಯವಸ್ಥಾಪಕರು ಹಿರಿಯ ಅಧಿಕಾರಿಗಳೊಡನೆ ಚರ್ಚಿಸಿ ಅವರ ಆದೇಶ ಪಡೆದು ಸೋಮವಾರದಂದು ಖುದ್ದು ಬಂದು ಪ್ರಯಾಣಿಕರಿಗೆ ಶೌಚಾಲಯ ವ್ಯವಸ್ಥೆ ಕಲ್ಪಿಸುವ ಭರವಸೆ ನೀಡಿದ್ದರು. ಆದರೆ ಅವರಿಗೆ ಇದೂವರೆಗೆ ಸೋಮವಾರವೇ ಬಂದಿಲ್ಲವೆಂಬುದು ಸ್ಥಳೀಯರ ಆಕ್ಷೇಪ. ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಮಾನವೀಯತೆಯುಳ್ಳ ಮತ್ತು ದಕ್ಷ ಅಧಿಕಾರಿಗಳು ಯಾರಾದರೂ ಉಳಿದಿದ್ದಲ್ಲಿ ಪುರುಷ ಪ್ರಯಾಣಿಕರೆನೋ ಎಲ್ಲೆಂದರಲ್ಲಿ ಜಲಬಾಧೆ ತೀರಿಸಿಕೊಳ್ಳಬಹುದು ಆದರೆ ಮಹಿಳಾ ಪ್ರಯಾಣಿಕರು ಎಲ್ಲಿಗೆ ಹೋಗಬೇಕು? ವೃದ್ಧರು, ವಿದ್ಯಾರ್ಥಿನಿಯರ ಪಾಡೇನು ಎಂಬ ಸಮಸ್ಯೆ ಬಗ್ಗೆ ಬಗ್ಗೆ ಕನಿಷ್ಠ ಪರಾಮರ್ಶಿಸಿ ತಮ್ಮ ಕುಟುಂಬದ ಮಹಿಳೆಯರ ಮತ್ತು ಮಹಿಳಾ ಪ್ರಯಾಣಿಕರ ಮಾನ ಒಂದೇ ಎಂಬುದನ್ನರಿತು ಟೆಂಡರ್ ಹಿಡಿದ ವ್ಯಕ್ತಿಗೆ ತಕ್ಷಣ ಶೌಚಾಲಯ ನಿರ್ವಹಣೆಗೆ ಖಡಕ್ ಆದೇಶ ನೀಡಬೇಕು ಮತ್ತು ಸಾರಿಗೆ ನಿಯಂತ್ರಕರು ತಾವು ಪ್ರಯಾಣಿಕರ ಸೇವಕರೆಂಬ ಕನಿಷ್ಠ ಪ್ರಜ್ಞೆ ಬೆಳೆಸಿಕೊಳ್ಳಬೇಕೆಂಬುದು ಇಲ್ಲಿನ ಜನತೆಯ ಆಗ್ರಹವಾಗಿದೆ.

> ರಬಕವಿ-ಬನಹಟ್ಟಿ ನೂತನ ಬಸ್‌ನಿಲ್ದಾಣಗಳಲ್ಲಿನ ಮೂತ್ರಾಲಯ ಸಮಸ್ಯೆಯ ಬಗ್ಗೆ ಮೇಲಧಿಕಾರಿಗಳೊಡನೆ ಚರ್ಚಿಸಲಾಗಿದ್ದು, ಈಗಾಗಲೇ ಟೆಂಡರ್ ಕಾರ್ಯ ಮುಗಿದಿದ್ದು, ಗುತ್ತಿಗೆದಾರನಿಗೆ ಸೋಮವಾರದಂದು ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲು ಸೂಚಿಸಲಾಗಿದೆ. ಮೇಲಧಿಕಾರಿಗಳೊಡನೆ ಮಾತನಾಡಿ ಸಮಸ್ಯೆಗಳಿಗೆ ತ್ವರಿತ ಪರಿಹಾರ ಒದಗಿಸಲಾಗುವುದು.
>
> । ಎಸ್.ಬಿ. ಗಸ್ತಿ. ಜಮಖಂಡಿ ವಿಭಾಗೀಯ ಸಾರಿಗೆ ವ್ಯವಸ್ಥಾಪಕರು.

# ವಿದ್ಯಾರ್ಥಿಗಳಲ್ಲಿ ಮನಸ್ಸು ನಿಯಂತ್ರಿಸುವ ಛಲ ಇರಬೇಕು



**ಜಮಖಂಡಿ :** ಯುವಜನತೆ ಮನಸ್ಸುಗಳಿಂದು ಬಹುತೇಕ ಓದು, ಬರಹ ಅಭಿರುಚಿ ಕಳೆದುಕೊಳ್ಳುತ್ತಿದ್ದು, ಅಧ್ಯಯನ ಶೀಲತೆ ಮರೆಯಾಗುತ್ತಿದೆ. ಅನಗತ್ಯ ದುಗುಡು, ದುಮ್ಮಾನು, ಕಲರಮಯ ಲೋಕದಲ್ಲಿ ಮುಳುಗಿ ಸ್ವಚ್ಛಂದವಾಗಿ ವಿಹರಿಸುತ್ತಿರುವ ಹಿನ್ನಲೆಯಲ್ಲಿ ಶೈಕ್ಷಣಿಕ ಪ್ರಗತಿ ಹಿನ್ನಡೆಯಾಗುತ್ತಿದೆ ಎಂದು ಆಧ್ಯಾತ್ಮಿಕ ಜೀವಿ ವಿಶ್ರಾಂತ ಶಿಕ್ಷಕ ಡಿ.ಎಸ್.ಕುಂಬಾರ ಹೇಳಿದರು.

ತಾಲೂಕಿನ ಚಿಕ್ಕಪಡಸಲಗಿ ಶಿವಶರಣ ಹರಳಯ್ಯ ಸ್ಮಾರಕ ಪ್ರೌಢ ಶಾಲೆಯಲ್ಲಿ ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಮಕ್ಕಳಿಗೆ ವಾರ್ಷಿಕ ಪರೀಕ್ಷಾ ದೃಷ್ಟಿಯಿಂದ ಹಮ್ಮಿಕೊಂಡಿದ್ದ ಪ್ರೇರಣಾ ಉಪನ್ಯಾಸದಲ್ಲಿ ಮಾತನಾಡಿದ ಅವರು, ಸಮಾಜದಲ್ಲಿಹೆಚ್ಚುಕಡಿಮೆ ಇಂಥಸ್ತರದಯುವಮನಗಳು ಚಂಚಲತೆ ಭಾವದಲ್ಲಿ ತೇಲಿಕೊಂಡು ತಮ್ಮ ಭವಿಷ್ಯ ಮಾರಕ ಮಾಡಿಕೊಳ್ಳುತ್ತಿರುವದು ತೀವ್ರ ನೋವಿನ ಸಂಗತಿಯಾಗಿದೆ ಎಂದರು.

ಪ್ರೌಢಹಂತದ ಮಕ್ಕಳ ಬಾಲ್ಯಾವಸ್ಥೆ ಈಗ ಕಳೆದುಹೋಗಿದೆ. ಪ್ರೌಢಾವಸ್ಥೆ ವಯೋಮಾನ ಇದೀಗ ಬಂದೆರಗಿದೆ. ಕಾರಣ ಮಸ್ತಕದಲ್ಲಿ ಹೈಸ್ಕೂಲ್‌ಪಠ್ಯದಲ್ಲಿನ ಜ್ಞಾನಬೆಳವಣಿಗೆ ಕರಗತ ಮಾಡಿಕೊಳ್ಳಲು ಮುಂದಾಗಬೇಕು. ಅಕ್ಷರ ಮಾಲೆಗಳ ಸಂಪಾದನೆಗೆ ಏಕಾಗ್ರತೆಯಿಂದ ಪ್ರಯತ್ನಿಸಿ ತಮ್ಮ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಿಸಿಕೊಳ್ಳುವುದರ ಮೂಲಕ ಮುಂದಿನ ಶೈಕ್ಷಣಿಕ ಭವಿಷ್ಯವನ್ನು ಉನ್ನತೀಕರಿಸಿಕೊಳ್ಳಬೇಕೆಂದರು. ಮಕ್ಕಳಿಗೆ ವ್ಯಯಕ್ತಿಕ ನಿರ್ಧಿಷ್ಟ ಗುರಿ, ಆತ್ಮವಿಶ್ವಾಸ, ನಿರಂತರ ಪ್ರಯತ್ನ, ಏಕಾಗ್ರತೆ ಇರಬೇಕು. ಪಾಠ ಬೋಧನೆ ಪ್ರವಚನ ಆಸಕ್ತಿಯಿಂದ ಆಲಿಸುವ ಕುತೂಹಲಬೇಕು. ತಾಳ್ಮೆ, ಸಂಯಮತೆ ಸಾಮಥ್ಯ ಸೂತ್ರಗಳನ್ನಿರಿಸಿಕೊಂಡು ಗುರಿ ಛಲ ಸಾಧನೆಗೆ ಮುಂದಾಗಬೇಕು. ಓದುವ ಕ್ರಮಬದ್ಧತೆ, ಆಹಾರ ಪದ್ಧತಿ ಅಳವಡಿಸಿಕೊಂಡು ಓದು, ಬರಹದ ಬೌದ್ಧಿಕ ಸ್ವತ್ತು ಹೆಚ್ಚಿಸಿಕೊಳ್ಳಬೇಕು.

ಮನಸ್ಸು ನಿಯಂತ್ರಿಸಿಕೊಂಡು ಓದಲೇಬೇಕು, ಏನಾದರೂ ಸಾಧಿಸಲೇಬೇಕು ಎಂಬ ಹಠಭಾವ ಅರಳಿಸಿಕೊಳ್ಳಬೇಕು. ಸ್ಪಷ್ಟ, ಶುದ್ಧ ಬರವಣಿಗೆ ವ್ಯಾಕರಣ ಛಂದಸ್ಸಿನೊಂದಿಗೆ ಸಾಗಬೇಕು. ಅಭ್ಯಾಸದ ಹಸಿವು ಹೆಚ್ಚಿಸಿಕೊಂಡು ಕಠಿಣ ಎನಿಸುವ ವಿಷಯಗಳನ್ನು ಹೆಚ್ಚು ಅಭ್ಯಸಿಸಲು ಪ್ರಯತ್ನಿಸಬೇಕು. ತಮ್ಮದೇ ಕೌಶಲ್ಯ, ಸಾಮಥ್ಯದಿಂದ ಸಾಧನೆ ಸಾಫಲ್ಯ ಕಂಡುಕೊಂಡು ಮೇಲೆ ಬರಬೇಕು. ಕಷ್ಟಗಳನ್ನು ಮೆಟ್ಟಿನಿಂತು ಶೈಕ್ಷಣಿಕ ಜೀವನ ಸಾಕಾರಗೊಳಿಸಿಕೊಳ್ಳಬೇಕೆಂದರು.

ಪ್ರಭಾರಿ ಮುಖ್ಯಶಿಕ್ಷಕ ಬಸವರಾಜ ಜಾಲೋಜಿ, ವಿಶ್ರಾಂತ ದೈಹಿಕಶಿಕ್ಷಕ ಬಸವರಾಜ ಅನಂತಪುರ, ಶಿಕ್ಷಕ ಈರಣ್ಣ ದೇಸಾಯಿ, ಲೋಹಿತ ಮಿರ್ಜಿ, ಸದಾಶಿವ ಸಿದ್ದಾಪುರ, ಜಿ.ಆರ್.ಜಾಧವ, ಶಿಕ್ಷಕಿ ಕವಿತಾ ಅಂಬಿ, ಸಹನಾ ಹತ್ತಳ್ಳಿ, ಪ್ರಮೀಳಾ ತೇಲಸಂಗ, ಅಕ್ಷತಾ ಮೂತ್ತೂರ ಸಹಿತ ಹಲವರು ಇದ್ದರು.

# ಪದವಿ ನಂತರ ಒಳ್ಳೆಯ ಅವಕಾಶಗಳಿದ್ದು ಅವುಗಳನ್ನು ಬಳಸಿಕೊಂಡು ಸುಂದರ ಬದುಕು ಕಟ್ಟಿಕೊಳ್ಳಿರಿ: ಪ್ರೊ ವಿ.ಎಸ್. ಬಗಲಿ




**ತಿಕೋಟಾ :** ಪಟ್ಟಣದ ಬಿ.ಎಲ್.ಡಿ ಇ ಸಂಸ್ಥೆಯ ನೂತನ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಭಾಭವನದಲ್ಲಿ ಬುದವಾರ ದಿನಾಂಕ 21-08-2024 ರಂದು ಬೆಳಿಗ್ಗೆ 10-30ಕ್ಕೆ ಬಿ.ಎ/ಬಿ.ಕಾಂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಮತ್ತು ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುಚಟಿಕೆಗಳ ಸಮಾರೋಪ ಸಮಾರಂಭದಲ್ಲಿ ಬಿ.ಎಲ್.ಡಿ ಇ ಸಂಸ್ಥೆಯ ಆಡಳಿತಾಧಿಕಾರಿಗಳಾದ ಪ್ರೊ ವಿ.ಎಸ್.ಬಗಲಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಸಂಸ್ಥೆಯು ವಿದ್ಯಾರ್ಥಿಗಳಿಗೆ ಸಂಸ್ಕೃತಿ, ಸಂಸ್ಕಾರ, ಪ್ರಾಪಂಚಿಕ ಜ್ಞಾನ ಹಾಗೂ ಕೌಶಲ್ಯಗಳನ್ನು ರೊಢಿಸಿಕೊಳ್ಳುವ ಮೂಲಕ ದೇಶವನ್ನು ಕಟ್ಟುವ ಕೆಲಸದಲ್ಲಿ ಸಹಕಾರಿಯಾದಲ್ಲಿ ಮಾತ್ರ ವಿದ್ಯಾರ್ಥಿಗಳು ಪಡೆದಂತಹ ಪದವಿಗಳಿಗೆ ಇನ್ನೂ ಹೆಚ್ಚಿನ ಮೆರಗು ಸಿಗಲಿದೆ. ಈ ನಿಟ್ಟಿನಲ್ಲಿ ಶಿಕ್ಷಣದ ನಂತರ ಒಳ್ಳೆಯ ಅವಕಾಶಗಳಿದ್ದು ಅವುಗಳನ್ನು ಪಡೆದುಕೊಂಡು ಸುಂದರ ಬದುಕು ಕಟ್ಟಿಕೊಳ್ಳುವಂತವರಾಗಿರಿ.ವಿದ್ಯಾರ್ಥಿಗಳಿಗೆ ಯಾವಗಲೂ ಸಹಾಯ ಮಾಡಲು ಅಧ್ಯಾಪಕರು ತೋರಿದ ಪ್ರಯತ್ನಗಳನ್ನು ನಾನು ಪ್ರಶಂಸಿಸಲು ಬಯಸುತ್ತೇನೆ ಎಂದು ಹೇಳಿದರು.

ಇನ್ನೂವ ಅತಿಥಿಗಳಾಗಿ ಆಗಮಿಸಿದ ಶಿವಣಗಿಯ ಸರಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಮೆಹತಾಬ ಕಾಗವಾಡ ಇವರು ತತ್ವಪದ ಹಾಡಿ ಮಾತನಾಡಿದ ಅವರು ಮೊದಲಿಗಿತಲೂ ಇಂದು ವಿದ್ಯಾರ್ಥಿಗಳು ಹೆಚ್ಚು ಶ್ರಮವಹಿಸಿ ಅಭ್ಯಾಸದಲ್ಲಿ ತೊಡಗುತ್ತಿದ್ದಾರೆ. ಪದವಿ ಮುಗಿದ ತಕ್ಷಣ ಕೆಲವರು ಉದ್ಯೋಗದತ್ತ ಮುಖ ಮಾಡಿದರೆ, ಮತ್ತೆ ಕೆಲವರು ಉನ್ನತ ವಿದ್ಯಾಭ್ಯಾಸಕ್ಕೆ ಹೋಗುತ್ತಾರೆ. ಇದರ ಜೂತೆ ಜೆತೆಗೆ ವಿದ್ಯಾರ್ಥಿಗಳು ಜೀವನದಲ್ಲಿ ಕಂಡುಕೊಳ್ಳಬೇಕಾದ ಅನಿವಾರ್ಯತೆ ಎದುರಗುತ್ತದೆ. ಭವಿಷ್ಯದಲ್ಲಿ ಬೇಕದ ಎಲ್ಲಾ ರೀತಿಯ ಸೌಲಭ್ಯ ನೀಡಲು ಸಂಸ್ಥೆ ಸದಾ ಸಿದ್ಧವಾಗಿರುತ್ತದೆ. ಭವಿಷ್ಯ ರೂಪಿಸಿಕೊಳ್ಳಲು ಇಂತಹ ಶಿಕ್ಷಣ ಸಂಸ್ಥೆಗಳು ಸಹಕಾರಿಯಾಗಿವೆ ಗ್ರಾಮೀಣ ಪ್ರದೇಶದ ಮಕ್ಕಳಿಗೆ ವಿಶಾಲವಾದ ಆಟದ ಮೈಧಾನ ವಿದ್ದು ಅದನ್ನು ಬಳಸಿಕೊಂಡು ನಿಮ್ಮ ಜೀವನ ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ನಿವೃತ್ತ ಪ್ರಾಚಾರ್ಯ ಪ್ರೊ ಎಸ್.ಪಿ.ಮದ್ರೇಕರ ಮಾತನಾಡಿ ವಿದ್ಯಾರ್ಥಿಗಳು ಸದಾ ಗುರಿಯತ್ತ ತಮ್ಮ ಚಿತ್ತವನ್ನು ನೀಡಬೇಕು ಎಂದು ಹೇಳಿದರು.ಪ್ರೊ ಆರ್.ಬಿ ಸಿರಸಂಗಿ ಅಧ್ಯಕ್ಷಯ ನುಡಿಗಳನ್ನಾಡಿ ವಿದ್ಯಾರ್ಥಿಗಳ ಬೆಳವಣಿಗೆಗೆ ಪೋಷಕರ ಹಾಗೂ ಗುರುಗಳ ಸಹಕಾರ ಸದಾ ಇರುತ್ತದೆ. ಹಾಗಾಗಿ ಇವರಿಗೆ ಋಣಿಯಾಗಿರುವುದು ಎಲ್ಲರ ಕರ್ತವ್ಯ,ನಿಮ್ಮ ಮುಂದಿನ ಭವಿಷ್ಯ ಉತ್ತಮವಾಗಿರಲ್ಲಿ ಎಂದು ಹರ್ಷ ವ್ಯಕ್ತಪಡಿಸಿದರು.ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥರಾದ ಡಾ.ಬಸವರಾಜ ಸಾಲವಾಡಗಿ ಅವರು ವರದಿ ವಾಚನ ಮಾಡಿ. ಪ್ರಾಸ್ತಾವಿಕ ಮಾತನಾಡಿದರು.

ಇದೇ ಸಂದರ್ಭದಲ್ಲಿ ವಿವಿಧ ವಿಭಾಗಗಳಲ್ಲಿ ಅತೀ ಹೆಚ್ಚು ಅಂಕಗಳಿಸಿ ಮಹಾವಿದ್ಯಾಲಯಕ್ಕೆ ಕೀರ್ತಿ ಹೆಚ್ಚಿಸಿದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಲಾಯಿತು.

ಕ್ರೀಡೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಿ ಗೌರವಿಸಲಾಯಿತು.ಮಹಾವಿದ್ಯಾಲಯದ ಎಲ್ಲ ಬೋಧಕ,ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಗವಿ ಶ್ರೀಗಳಿಂದ ಪಟೇಲಗೆ ಸನ್ಮಾನ



**ಕೊಪ್ಪಳ :** ಕೊಪ್ಪಳ ನಗರಸಭೆಗೆ ನೂತನ ಅಧ್ಯಕ್ಷರಾಗಿ ಜಯ ಸಾಧಿಸಿದ ಮೂರನೇ ವಾರ್ಡಿನ ಹಿರಿಯ ಸದಸ್ಯ ಅಮ್ಜದ್ ಪಟೇಲ್ ರವರು ಗುರುವಾರ ಗವಿಮಠಕೆ ತೆರಳಿ, ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳ ವರ ಆಶೀರ್ವಾದ ಪಡೆದರು ,ಇದೇ ವೇಳೆ ಶ್ರೀ ಗವಿಮಠದ ಪರವಾಗಿ ಸ್ವಾಮೀಜಿಯವರು ಸನ್ಮಾನಿಸಿ ಆಶೀರ್ವದಿಸಿ ಶುಭ ಕೋರಿದರು

ಕೊಪ್ಪಳ ನಗರದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವಂತೆ ಹಾಗೂ ಕಾರ್ಯಾಲಯಕ್ಕೆ ಬರುವ ಜನ ಸಾಮಾನ್ಯರ ಸಮಸ್ಯೆಗಳಿಗೆ ನೇರ ಸ್ಪಂದನೆ ನೀಡಿ ಅವರ ಬೇಕು ಬೇಡಿಕೆಗಳ ಈಡೇರಿಕೆಗಾಗಿ ಕೆಲಸ ಮಾಡಿ ಉತ್ತಮ ಸಮಾಜ ಸೇವಾ ಕಾರ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಜನರ ಪ್ರೀತಿ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗು ಎಂದು ನಗರಸಭೆಯ ನೂತನ ಅಧ್ಯಕ್ಷರಾದ ಅಮ್ಜದ್ ಪಟೇಲ್ ಗೆ ಗವಿಮಠದ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಸಲಹೆ ನೀಡಿ ಆಶೀರ್ವದಿಸಿ ಶುಭ ಕೋರಿದರು.

# ನೀಡಿರುವ ಜವಾಬ್ದಾರಿ ಪ್ರಾಮಾಣಿಕವಾಗಿ ನಿಭಾಯಿಸುವೆ: ಪಟೇಲ್



**ಕೊಪ್ಪಳ :** ಸಿಕ್ಕಿರುವ ಅವಕಾಶಗಳ ಸದುಪಯೋಗ ಪಡೆದುಕೊಂಡು ಸರ್ಕಾರ ಮತ್ತು ನಗರದ ಜನತೆ ನನಗೆ ನೀಡಿರುವ ಜವಾಬ್ದಾರಿಯನ್ನು ಪ್ರಮಾಣಿಕವಾಗಿ ನಿಭಾಯಿಸುವೆ ಎಂದು ಕೊಪ್ಪಳ ನಗರಸಭೆಯ ನೂತನ ಅಧ್ಯಕ್ಷ ಅಮ್ಜದ್ ಪಟೇಲ್ ಹೇಳಿದರು

ಅವರು ಶನಿವಾರ ಬೆಳಿಗ್ಗೆ ನಗರದ ಮಿಲತ್ ಪಬ್ಲಿಕ್ ಶಾಲೆ ಸಭಾಂಗಣದಲ್ಲಿ ಏರ್ಪಡಿಸಿದ ಸನ್ಮಾನವನ್ನು ಸ್ವೀಕರಿಸಿದ ಬಳಿಕ ಮಾತನಾಡಿ ಮನುಷ್ಯನಿಗೆ ಸನ್ಮಾನ ದಿಂದ ಜವಾಬ್ದಾರಿ ಹೆಚ್ಚಿಸುತ್ತದೆ, ಜನತೆ ನನ್ನ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿಕೊಂಡು ಸರ್ವ ಜನಾಂಗದ ಬೇಕು ಬೇಡಿಕೆಗಳ ಈಡೇರಿಕೆಗಾಗಿ ಸ್ಥಳೀಯ ಶಾಸಕ ಕೆ ರಾಘವೇಂದ್ರ ಹಿಟ್ನಾಳ ಸಂಸದ ಕೆ ರಾಜಶೇಖರ್ ಹಿಟ್ನಾಳ ಮತ್ತು ನಮ್ಮ ಅಲ್ಪಸಂಖ್ಯಾತ ಸಮುದಾಯದ ನಾಯಕ ಹಾಗೂ ಸಚಿವರಾದ ಜಮೀರ್ ಅಹ್ಮದ್ ಖಾನ್ ರವರ ಸಹಯೋಗದಲ್ಲಿ ಶ್ರಮಿಸುವದಾಗಿ ಅವರು ಹೇಳಿದರು.

ಮುಂದುವರಿದು ಮಾತನಾಡಿ ನಗರಸಭೆಗೆ ಬರುವ ಸಾರ್ವಜನಿಕರ ಅಗತ್ಯ ಕೆಲಸಗಳನ್ನು ನಿರ್ವಹಿಸಲು ಜನತೆಗೆ ಯಾವುದೇ ರೀತಿಯ ತೊಂದರೆಯಾಗದಂತೆ, ಕಚೇರಿಯ ಸಿಬ್ಬಂದಿಗಳಿಗೆ ಸೂಕ್ತ ಸಲಹೆ ಮತ್ತು ಸೂಚನೆ ನೀಡಲಾಗುವುದು ಶೀಘ್ರವಾಗಿ ಅರ್ಜಿಗಳ ವಿಲೇವಾರಿ ಮಾಡಲು ಅಗತ್ಯ ಅಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದವರು ನನ್ನ ಬೆಳವಣಿಗೆಗೆ ಕಾರ್ಣಿಕರ್ತರಾಗಿರುವ ಮಿಲ್ಲತ್ ಶಿಕ್ಷಣ ಮತ್ತು ಕಲ್ಯಾಣ ಸಂಸ್ಥೆಯ ಈ ಸನ್ಮಾನ ನನಗೆ ಪ್ರೇರಣೆ ,ಇನ್ನಷ್ಟು ಒಳ್ಳೆಯ ಕೆಲಸ ಮಾಡಲು ಶಕ್ತಿ ತುಂಬುವಂತಾಗಿದೆ ಸಂಸ್ಥೆಯ ಯಾವುದೇ ಕೆಲಸ ಇರಲಿ ಅದಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ಕೊಪ್ಪಳ ನಗರಸಭೆಯ ನೂತನ ಅಧ್ಯಕ್ಷ ಅಮ್ಜದ ಪಟೇಲ್ ಹೇಳಿದರು

ಸಮಾರಂಭದಲ್ಲಿ ಹಿರಿಯ ಉರ್ದು ಸಾಹಿತಿ ಹಾಗೂ ನಿವೃತ್ತ ಪ್ರಾಧ್ಯಾಪಕ ಎಂ ಅನ್ವರ್ ಹುಸೇನ ಅಂಜುಮನ್ ಕಮಿಟಿಯ ಅಧ್ಯಕ್ಷ ಎಂ ಡಿ ಆಸಿಫ್ ಕರ್ಕಿಹಳ್ಳಿ ಕರ್ನಾಟಕ ಮುಸ್ಲಿಂ ಯುನಿಟಿ ಜಿಲ್ಲಾ ಅಧ್ಯಕ್ಷ ಎಂ ಡಿ ಜಿಲಾನ ಕಿಲ್ಲೆದಾರ ಮೈ ಲೈಕ್, ಗಫಾರ್ ದಿಡ್ಡಿ, ಶಾಮಿದ್ ವಾಲಿಕಾರ್ ಪದಾಧಿಕಾರಿಗಳಾದ ಎಂ ಸಾಧಿಕ ಅಲಿ, ಎಂಡಿ ಜಹೀರ್ ಅಲಿ, ಸೈಯದ್ ಇಮಾಮ ಹುಸೇನ್ ಸಿಂದೋಗಿ, ಅಬ್ದುಲ್ ಅಜೀಜ್ ಮಾನ್ವಿ ಕರ್, ಮುಖ್ಯ ಶಿಕ್ಷಕ ಎಂಡಿ ಅಜೀಜ್ ರೇವಡಿ, ಸಹ ಶಿಕ್ಷಕ ನರಸಿಂಹ ದೇಸಾಯಿ ಸೇರಿದಂತೆ ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದರು.

# ಕೊಪ್ಪಳ ಇನ್ನರ್ ವೀಲ್ ಕ್ಲಬ್ ಇಂದ ಸಿಪಿಎಸ್ ಶಾಲೆಗೆ ಬೆಂಚ್ ವಿತರಣೆ




**ಕೊಪ್ಪಳ:** ಕಿರ್ಲೋಸ್ಕರ್ ಕಾರ್ಖಾನೆ ಸಹಯೋಗದಲ್ಲಿ, ಕೊಪ್ಪಳ ಇನ್ನರ್ ವೀಲ್ ಕ್ಲಬ್ ನ ಎರಡನೇ ದತ್ತು ಪಡೆದ ಸರಕಾರಿ ಕೇಂದ್ರ ಹಿರಿಯ ಪ್ರಾಥಮಿಕ ಸಿಪಿಎಸ ಶಾಲೆಗೆ 25 ಬೆಂಚುಗಳನ್ನು ದಾನವಾಗಿ ನೀಡಿ ಮಕ್ಕಳ ಶೈಕ್ಷಣಿಕ ಸೌಲಭ್ಯ ವ್ಯವಸ್ಥೆ ಮಾಡಲಾಯಿತು ಶಾಲೆಗೆ ಬೆಂಚ್ ದೇಣಿಗೆ ನೀಡಿದ ಸರಳ ಸಾಂಕೇತಿಕ ಸಮಾರಂಭದ ಅಧ್ಯಕ್ಷತೆಯನ್ನು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಹಳ್ಳಿ ಮಾತನಾಡಿ ಉದಾರತೆಯಿಂದ ವಿದ್ಯಾರ್ಥಿಗಳ ಓದು ಮತ್ತು ಅಧ್ಯಯನ ಮಾಡುವ ಪರಿಸರವು ಗುಣಮಟ್ಟವಾಗಿ ಸುಧಾರಿಸಿದೆ.

ವಿದ್ಯಾರ್ಥಿಗಳು ಈಗ ಹೊಸ ಉತ್ಸಾಹದಿಂದ ಮತ್ತು ನಲಿ ಕಲಿ ಯೊಂದಿಗೆ ಓದು ಬರಹ ಮಾಡುತ್ತಿದ್ದಾರೆ ಎಂದು ಹೇಳಿದ ಅವರು ಮಕ್ಕಳ ಶೈಕ್ಷಣಿಕ ಸೌಲಭ್ಯ ಒದಗಿಸಿಕೊಡುವ ನಿಟ್ಟಿನಲ್ಲಿ ನಮ್ಮ ಸಂಸ್ಥೆ ಪ್ರಾಮಾಣಿಕವಾಗಿ ಶ್ರಮಿಸುತ್ತಿದೆ ಇದು ನಮ್ಮ ಎರಡನೆಯ ದತ್ತು ಪಡೆದ ಶಾಲೆ ಯಾಗಿದೆ ಇಲ್ಲಿನ ಮಕ್ಕಳ ಮುಂದಿನ ಭವಿಷ್ಯ ಉಜ್ವಲ ಗೊಳ್ಳಲು ತಮ್ಮ ಸಂಸ್ಥೆಯಿಂದ ಕೈಲಾದಷ್ಟು ಸಹಾಯ ಸಹಕಾರ ನೀಡಲಾಗಿದೆ ಎಂದು ಉಮಾ ಮಹೇಶ್ ತಂಬ್ರಹಳ್ಳಿ ವಿವರಿಸಿದ್ದರು

ಈ ಕಾರ್ಯಕ್ರಮದಲ್ಲಿ , ಕೊಪ್ಪಳ ಇನ್ನರ್ ವೀಲ್ ಕ್ಲಬ್ ಕಾರ್ಯದರ್ಶಿ ಮೀನಾಕ್ಷಿ ಬಣ್ಣದ ಬಾವಿ, ಐ ಎಸ್ ಓ ಮಧು ನಿಲೋಗಲ್ ಮತ್ತು ಸಂಪಾದಕಿ ನಾಗವೇಣಿ . ಕಾರ್ಯಕಾರಿ ಸಮಿತಿಯ ಸದಸ್ಯರಾದ ಡಾ,ರಾಧಾ ಕುಲಕರ್ಣಿ, ಪಾರ್ವತಿ ಪಾಟೀಲ್, ನೀತಾ ತಂಬ್ರಳ್ಳಿ, ಮಾಜಿ ಅಧ್ಯಕ್ಷರಾದ ಶರಣಮ್ಮ ಪಾಟೀಲ್ ಮತ್ತು ಶಾರದಾ ದಾದ್ಮಿ ಅವರು ಹಾಗೂ ಕ್ಲಬ್ ಸದಸ್ಯರಾದ ಅನಿತಾ ಬಜಾರಮಠ, ಜ್ಯೋತಿ ಮಟ್ಟಿ, ಶೋಭಾ, ಕವಿತಾ ಶೆಟ್ಟರ್, ನಾಗರತ್ನ, ರೇಖಾ ಕಡ್ಲೆ ಮತ್ತು ಹೇಮಾ ಸೇರಿದಂತೆ ಮಹಿಳೆಯರು ಶಿಕ್ಷಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State